

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 293 | Wednesday 10-04-2024 | E-mail : maruti.b.hosamani76@gmail.com | Page: 4 | Price : Rs. 1/-

## ಗಾಂಜಾ ಮಾರಾಟ ಮಾಡುತ್ತಿದ್ದವನ ಬಂಧನ



**ಚೋರನೂರು :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಚೋರನೂರು ಕಡೆಗೆ ಹೋಗುವ ರಸ್ತೆಯ ಗುಂಡಿನ ಹೊಳೆ ಹತ್ತಿರವಿರುವ ಬೀಜೋತ್ಪಾದನಾ ಕೇಂದ್ರದ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ್ ಇವರ ನೇತೃತ್ವದಲ್ಲಿ ಸಿಪಿಐ ಕೂಡ್ಲಿಗಿ ಪಿಎಸ್ಐ ಕೂಡ್ಲಿಗಿ ಠಾಣೆ ಯವರು ಏಪ್ರಿಲ್ 9 ರಂದು ಬೆಳಿಗ್ಗೆ 11:15 ಗಂಟೆಗೆ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದು ಸುಮಾರು 370 ಗ್ರಾಂ ಗಾಂಜಾ ವಶಪಡಿಸಿ ಕೊಂಡು ಅಂದಾಜು ಬೆಲೆ 37 ಸಾವಿರ ರೂಪಾಯಿ ಗಳು ಮತ್ತು ನಗದು ಹಣ ರೂ.250 ಜಪ್ತಿ ಮಾಡಿ ಆರೋಪಿಯನ್ನು ದಸ್ತಗಿರಿ ಮಾಡಿ ಎನ್ ಡಿ ಪಿ ಎಸ್ ಕಾಯ್ದೆ ಅಡಿ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಸದರಿ ಕಾರ್ಯಚಟಣೆಯಲ್ಲಿ ಭಾಗವಹಿಸಿದ ಪೊಲೀಸ್ ಉಪಾಧೀಕ್ಷಕರು ಸಿಪಿಐ ಕೂಡ್ಲಿಗಿ ಪಿಎಸ್ಐ ಕೂಡ್ಲಿಗಿ ಮತ್ತು ಸಿಬ್ಬಂದಿಯವರಿಗೆ ಮಾನ್ಯ ಪೋಲಿಸ್ ಅಧೀಕ್ಷಕರು ವಿಜಯನಗರ ಜಿಲ್ಲೆ ಅವರು ಪ್ರಶಂಸಿಸಿದರೆ.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರಾಘವೇಂದ್ರ. ಬಿ. ಸಾಲುಮನೆ. ಕೂಡ್ಲಿಗಿ.**

## ಉದ್ಭವ ಮೂರ್ತಿ ವೀರಭದ್ರ ಮುಚಖಂಡಿ



**ಮುಚಖಂಡಿ :** ಮುಳುಗಡೆ ನಗರಿಗೆ ಖ್ಯಾತ ಧಾರ್ಮಿಕ, ಸಾಂಸ್ಕೃತಿಕ ಅಸಂಖ್ಯಾತ ಭಕ್ತರ ಆಚರಣೆ ಉತ್ಸವಗಳಿಗೆ ಹೆಸರುವಾಸಿಯಾದ ನಮ್ಮ ಕರುನಾಸಾಗರ ಕಣವಿ ವೀರಭದ್ರೇಶ್ವರ ದೇವರು, ಹಲವು ವೈಶಿಷ್ಟೇಗಳಿಗೆ ಖ್ಯಾತಿ ಪಡೆದ ಬಾಗಲಕೋಟೆ ನಗರದ ಮುಚಖಂಡಿ ಕೆರೆಯ ತಟದಲ್ಲಿ ಉದ್ಭವ ಮೂರ್ತಿಯಾಗಿ ಅಸಂಖ್ಯಾತ ಭಕ್ತರ ಮನದೊಳಗೆ ನೆಲೆ ಗೊಂಡಿರುವ ಶ್ರೀ ವೀರಭದ್ರೇಶ್ವರ ರಥೋತ್ಸವವು ಮಂಗಳವಾರ ಸಂಜೆ ನೇರವೇರಿಸಿ ಮಾರನೇಯ ದಿನ ಅಗ್ಗಿ (ಅಗ್ನಿ ) ಉತ್ಸವದೊಂದಿಗೆ ನೆರವೇರುವುದು, ಸುಮಾರು ವರ್ಷಗಳ ಇತಿಹಾಸ ಹೊಂದಿರುವ ವೀರಭದ್ರ ದೇವರು ಕಡಿದಾದ ನಿರ್ಜನ್ ಪ್ರದೇಶದಲ್ಲಿ ತುಂಬು ಆಳದ ನೀರಿನ ಜಾಗದಲ್ಲಿ ಭೂಮಿಯಿಂದ ಮೇಲೇದ್ದು ಉದ್ಭವ ಮೂರ್ತಿಯಾಗಿ ದನಗಾಯಿ ಭಕ್ತಳ ನೆದರಿಗೆ ಬಿದ್ದು, ಊರ ಸಮೂಹದ ಭಕ್ತರೆಲ್ಲ ಸೇರಿಕೊಂಡು ಉದ್ಭವ ಜಾಗದಲ್ಲಿ ಪ್ರತಿಷ್ಠಾಪಿಸಿ ಕಣವಿ ವೀರಭದ್ರೇಶ್ವರನೆಂದು ನಾಮಕರಣ ಮಾಡಿ ಪೂಜಾ ಕೈಂಕರ್ಯ ಮಾಡುತ್ತಾ ದೇವಸ್ಥಾನದ ಜೀರ್ಣನ್ನೋದಾರ ಕೈಗೊಂಡು ಉಪ್ಪಿನ ಶಾಬಾದಿ ಅರ–ಕೇರಿ ಕಲಾದಾಗಿ ಮನೆತನದವರೆಲ್ಲ ಸೇರಿ ಸರಕಾರದ ಸಹಕಾರದೊಂದಿಗೆ ದೇವಸ್ಥಾನ ಬೆಳೆದು ಇಂದು ಪ್ರಖ್ಯಾತ ಶಿಕ್ಷಣ ಸಂಸ್ಥೆಯಾದ ಶ್ರೀ ಬಸವೇಶ್ವರ್ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ಜೀರ್ಣದ್ದಾರದ ನಿರ್ವಹಣೆಯನ್ನು ಈ ಟ್ರಸ್ಟ ನಿಭಾಯಿಸುತ್ತಿದೆ.

**ರಾಜ್ಯ ವಿಶೇಷ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ವಾಯ್.ಸಿ. ಹಲಗಿ. ಶಿರೂರು.**

## ಕಲಕೇರಿ ಗ್ರಾಮದಲ್ಲಿ ಯುಗಾದಿ ಪಾಡ್ಯ ನಿಮಿತ್ತವಾಗಿ ಬಣ್ಣದ ಹಬ್ಬ ಆಚರಣೆ



**ಕಲಕೇರಿ :** ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮದಲ್ಲಿ ಯುಗಾದಿ ಪಾಡ್ಯ ನಿಮಿತ್ಯವಾಗಿ ಕಲಕೇರಿಯಲ್ಲಿ ಬಣ್ಣದ ಹಬ್ಬವನ್ನು ಆಚರಣೆ ನೆರವೇರಿತು.

ಎಂ.ಪಿ. ನದಾಫ್ ಗುರುಗಳು ನಮ್ಮ ಭಾಗದಲ್ಲಿ ಶ್ರೀ ವೀರಘಂಟಿ ಮಡಿವಾಳೇಶ್ವರ ಎಲ್ಲೆಲ್ಲಿ ಇದ್ದಾರೋ ಅಲ್ಲಿ ಹೋಳಿ ಹಬ್ಬವನ್ನು ಆಚರಣೆ ಮಾಡುವುದಿಲ್ಲ ಇಂದು ನಮ್ಮ ಭಾಗದಲ್ಲಿ ತಲೆ ತಲಾಂತರದಿಂದಬಂದಂತಹಯುಗಾದಿಹಬ್ಬಕ್ಕೆ ನಮ್ಮಲ್ಲಿ ನಾನಾತರ ರಂಗ ಪಂಚಮಿಯನ್ನು ಬಣ್ಣದ ಹಬ್ಬ ಆಚರಣೆ ನಾವು ಮಾಡುತ್ತಾ ಬಂದಿದ್ದೇವೆ. ಇಲ್ಲಿ ಎಲ್ಲರೂ ಒಂದೇ ತಾಯಿ ಮಕ್ಕಳಂತೆ ಬಣ್ಣದ ಹಬ್ಬವನ್ನು ಯುಗಾದಿ ಹಬ್ಬಕ್ಕೆ ನಾವು ರಂಗ ಪಂಚಮಿ ಎಂದು ಆಚರಣೆ ಮಾಡುತ್ತೇವೆ.

ದೊಡ್ಡಪ್ಪಗುಮಶೆಟ್ಟಿ ಇವರು ನಮ್ಮಲ್ಲಿ ಜಾತಿ ಮತ ಎನ್ನದೆಹಿಂದೂಮುಸ್ಲಿಂಕೂಡಿಕೊಂಡುಬಣ್ಣದ ಹಬ್ಬವನ್ನು ಆಚರಣೆ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿಮಾತನಾಡಿದರು.

ಶ್ರೀ ವೀರಗಂಟಿ ಮಡಿವಾಳೇಶ್ವರ ಎರಡು ಅಗ್ನಿ ಉತ್ಸವ ಇದ್ದ ಕಾರಣಕ್ಕೆ ನಮ್ಮಲ್ಲಿ ಹೋಳಿ ಹಬ್ಬವನ್ನು ಆಚರಣೆ ಮಾಡುವುದಿಲ್ಲ ಎಂದು ಊರಿನ ಗ್ರಾಮಸ್ಥರು ಮಾತನಾಡಿ ಅನಾದಿ ಕಾಲದಿಂದಬಂದಿರುವಯುಗಾದಿಹಬ್ಬಕ್ಕೆನಾವು ಗ್ರಾಮಸ್ಥರು ರಂಗ ಪಂಚಮಿ ಎಂದು ಆಚರಣೆ ಮಾಡುತ್ತೇವೆಎಂದುಗ್ರಾಮಸ್ಥರುತಿಳಿಸಿದರು.

ಶ್ರೀಶೈಲ ಅಡಿಕಿ. ಅಶೋಕ್ ಭೋವಿ. ವಿನೋದ್ ವಡಿಗೇರಿ. ಮೈನುದ್ದಿನ್ ಮನಿಯರ. ಮಡಿವಾಳಪ್ಪ ತಳವಾರ. ಶಿವಾನಂದ ಬೆಕಿನಾಳ. ಶರಣು ಗುಡುಗುಂಟಿ. ರಾಜು ಮಾದರ. ಅರ್ಜುನ ನಡುವಿನಮನಿ, ಸೋಮಶೇಖರ್ ಸಜ್ಜನ, ರಾಜು ಆಲಗೂರು, ರಾಜು ಅಡಿಕಿ, ಸುನಿಲ ಕಲಕೇರಿ, ಇನ್ನೂ ಅನೇಕರು ಗ್ರಾಮದ ಯುವಕರು ಮುಖಂಡರು ಪಾಲ್ಗೊಂಡು ಯುಗಾದಿ ಬಣ್ಣದ ಹಬ್ಬವನ್ನು ಅದ್ದೂರಿಯಿಂದ ಆಚರಣೆಮಾಡಿದರು.

**ತಾಲೂಕವರದಿಗಾರರುಹಾಗೂಎಸ್.ಕೆನ್ಯೂಸ್ ಕನ್ನಡಚಾನಲ್:ಮೈಬೂಬಬಾಷ.ಮನಗೂಳಿ ತಾಳಿಕೋಟೆ.**

## ಬದುಕಿನ ಕನಸುಗಳಿಗೆ ಶ್ರೀಕಾರ ಹಾಡಿ: ಡಾ. ಜಂಬಗಿ




**ಹಾರೂಗೇರಿ :** ಸ್ಥಳೀಯ ಎಸ್. ಎಸ್. ಜಂಬಗಿ ಮೆಮೋರಿಯಲ್ ಎಜ್ಯುಕೇಷನ್ ಆಂಡ್ ಚಾರಿಟೇಬಲ್ ಟ್ರಸ್ಟಿನ ಶ್ರೀ ಸಿದ್ಧಿ ವಿನಾಯಕ ಗ್ರಾಮೀಣ ಶಿಕ್ಷಣ ಮಹಾವಿದ್ಯಾಲಯ ಹಾರೂಗೇರಿಯಲ್ಲಿ ೨೦೨೩–೨೪ ನೇ ಸಾಲಿನ ಪ್ರಶಿಕ್ಷಣಾರ್ಥಿಗಳ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭ ಯಶಸ್ವಿಯಾಗಿ ನಡೆಯಿತು. ಸಮಾರಂಭದ ಘನ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಎಲ್. ಎಸ್. ಜಂಬಗಿಯವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸ್ವಯಂ ಶಿಸ್ತು ಮತ್ತು ಕನಸುಗಳನ್ನು ಸಾಕಾರಗೊಳಿಸುವ ಭವಿಷ್ಯದ ಯೋಜನೆಗಳನ್ನುರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸಮಾರಂಭದ ಉದ್ಘಾಟಕರಾಗಿ ಆಗಮಿಸಿದ್ದ ಮುಗಳಖೋಡದ ಬ.ನೀ. ಕುಲಗೋಡ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಮಧುಸೂದನ ಕೆ. ಬೀಳಗಿ ಅವರು ಮಾತನಾಡಿ, "ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಮೇಲೆ ಮಹತ್ವದ ಜವಾಬ್ದಾರಿಗಳು ಇವೆ. ಆಧುನಿಕತೆಯ ಭರಾಟೆಯಲ್ಲಿ ಭಾವೀ ಶಿಕ್ಷಕರು ಸಮಯಪಾಲನೆ ಹಾಗೂ ಶಿಸ್ತಿಗೆ ಪ್ರಾಮುಖ್ಯತೆ ನೀಡಬೇಕು. ಇವೆರಡೂ ಶಿಕ್ಷಕ ವೃತ್ತಿಯ ಕೈಗನ್ನಡಿ ಇದ್ದಂತೆ. ಬೋಧನೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ನಿಷ್ಠೆ ಹಾಗೂ ಬದ್ಧತೆಯಿಂದ ಇರಬೇಕು, ಶಿಕ್ಷಕರು ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೂಡಲಗಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ. ಮಹೇಶ ವಾಯ್. ಕಂಬಾರ ಅವರು, ಮಾತನಾಡಿ ಶಿಕ್ಷಕರು ಮೊದಲು ತಮ್ಮ ವೃತ್ತಿಗೆ ಗೌರವ ನೀಡಬೇಕು. ನಿರಂತರ ಪ್ರಯತ್ನ ಹಾಗೂ ಮಹತ್ವಾಕಾಂಕ್ಷೆ ಗುಣಗಳನ್ನು ಮೈಗೂಡಿಸಿಕೊಂಡಾಗ ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಅಲ್ಲದೆ ಶಿಕ್ಷಕ–ರಿಗೆ ಬದ್ಧತೆ ಮತ್ತು ಪರಿಪೂರ್ಣತೆ ನಿತ್ಯವೂ ಇರಬೇಕು ಎಂದು ಅಭಿಪ್ರಾಯಪಟ್ಟರು.

ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಆರ್ ಎಸ್. ಕಾಗವಾಡೆಯವರು ಒಕ್ಕೂಟದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಇದೇ ಸಂದರ್ಭದಲ್ಲಿ ಮಹಾವಿದ್ಯಾಲಯದ ವತಿಯಿಂದ ಅತಿಥಿಗಳನ್ನು ಸನ್ಮಾನಿಸಲಾಯಿತು. ಪ್ರಾಚಾರ್ಯರು, ಅಧ್ಯಕ್ಷರು, ಅತಿಥಿ ವೃಂದ ಮತ್ತು ವಿದ್ಯಾರ್ಥಿ ಪ್ರಧಾನ ಕಾರ್ಯದರ್ಶಿ ಕುಮಾರ. ವಿಜಯ ಪಾಟೀಲ, ಮಹಿಳಾ ಪ್ರತಿನಿಧಿ ಕುಮಾರಿ. ಸುಕನ್ಯಾ ಸುತಾರ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಮಹಾವಿದ್ಯಾಲಯದ ಉಪನ್ಯಾಸಕರು ಮತ್ತು ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು. ಜಡಸಿದ್ದಯ್ಯ ಹಿರೇಮಠ ಮತ್ತು ತಾನಾಜಿ ಅಕ್ಕೊಳ ಇವರಿಂದ ಗಾಯನ ನಡೆದವು. ಅಶ್ವಿನಿ ಹೊಸಪೇಟೆ ಪ್ರಾರ್ಥಿಸಿದರು.

ಅಕ್ಷತಾ ಡಾಬೋಳಿ ಸ್ವಾಗತ ಗೀತೆ ಹಾಡಿದರು. ಉಪನ್ಯಾಸಕರಾದ ಆರ್. ಸಿ. ಉಳ್ಳಾಗಡ್ಡಿ ಸ್ವಾಗತಸಿದರು. ಆರ್. ಬಿ. ಚನಗೌಡರ ಮಾಲಾರ್ಪಣೆ ಮಾಡಿದರು. ಶ್ರೀಮತಿ ಡಿ. ಎಮ್. ಗುಳ್ಳ ಸಂದೇಶ ವಾಚನ ಮಾಡಿದರು. ಎಂ. ಟಿ. ಬಿದರಿಯವರು ವಂದನಾರ್ಪಣೆ ನಡೆಸಿಕೊಟ್ಟರು. ಸುನೀಲ ಕಾಂಬಳೆ ಮತ್ತು ಅಕ್ಷತಾ ಮೇದಾರ ಸೊಗಸಾಗಿ ನಿರೂಪಿಸಿದರು.

## ಹೆಚ್ಚುತ್ತಿರುವ ಬಿಸಿಲಿನ ತಾಪ: ಜಿಲ್ಲೆಯಾದ್ಯಂತ ಜಾಗೃತಿ



**ಬಾಗಲಕೋಟೆ :** ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಓಆರ್.ಎಸ್ ಪಾಕೀಟ ವಿತರಿಸುವ ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆರೋಗ್ಯದ ಸಲಹೆಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಉಷ್ಣಾಂಶದ ಪ್ರಮಾಣ ಹೆಚ್ಚಾಗುತ್ತಿದ್ದು, ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಒಳಾಂಗಣ ಹಾಗೂ ಹೊರಾಂಗಣ ಪ್ರದೇಶಗಳಲ್ಲಿ ಉಷ್ಣತೆಯ ಒತ್ತಡದಿಂದ ಒತ್ತಡದಿಂದ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ. ತೀವ್ರ ಜ್ವರ, ಕೈ–ಕಾಲುಗಳು ಹಾಗೂ ಮೊಣಕಾಲುಗಳ ಸೆಳೆತ, ಪ್ರಜ್ಞೆ ತಪ್ಪುವುದು, ಸುಸ್ತು ಉಂಟಾಗುತ್ತದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೂಲಕ ಜನರಲ್ಲಿ ವಿವಿಡೆದೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ನರೇಗಾದಡಿ ವಿವಿದೆಡೆ ಕೆಲಸ ಮಾಡುವ ಕೂಲಿ ಕಾರ್ಮಿಕರ ಸ್ಥಳಗಳಿಗೆ ಭೇಟಿ ನೀಡಿ ಆರೋಗ್ಯದ ಸಲಹೆಗಳನ್ನು ತಿಳಿಸುವದಲ್ಲದೇ ಓಆರ್ಎಸ್ ಪಾಕೀಟಗಳನ್ನು ಸಹ ವಿತ–ರಿಸುತ್ತಿದ್ದಾರೆ. ವಿವಿಧ ಗ್ರಾಮಗಳಿಗೆ ಸಹ ತೆರಳಿ ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ. ಅಲ್ಲದೇ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಯಾದ್ಯಂತ ಸ್ಥಾಪಿಸಲಾದ ವಿವಿಧ ಚೆಕ್‌ಪೋಸ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಆಶಾ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮುಂಜಾಗ್ರತಾ ಕ್ರಮವಾಗಿ ಓಆರ್ಎಸ್ ಪಾಕೀಟಗಳನ್ನು ವಿತರಿಸುವ ಕೆಲಸ ಮಾಡುತ್ತಿದ್ದಾರೆ.

### ಮತದಾನ ಜಾಗೃತಿಗಾಗಿ ಪುರಸಭೆಯಿಂದ ಸೆಲ್ಫಿ ಕಾರ್ನರ್

## ಮತದಾನ ಸಂವಿಧಾನ ಹಕ್ಕು: ಈರಣ್ಣ ದಡ್ಡಿ




**ಮಹಾಲಿಂಗಪುರ :** ಮತದಾನವು ದೇಶದ ಪ್ರಜೆಗಳಿಗೆ ಸಂವಿಧಾನ ನೀಡಿದ ಪವಿತ್ರ ಹಕ್ಕಾಗಿದ್ದು, ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಹೇಳಿದರು.

ಮತದಾನ ಜಾಗೃತಿಗಾಗಿ ಪುರಸಭೆಯ ಆವರಣದಲ್ಲಿ ಸ್ಥಾಪಿಸಿರುವ ನಾನು ಹೆಮ್ಮೆಯ ಮತದಾರ ಎಂಬ ಸೆಲ್ಫಿ ಕಾರ್ನರ್ ಉದ್ಘಾಟಿಸಿ ಮಾತನಾಡಿದ ಅವರು ಮೇ.7ರಂದು ನಡೆಯಲಿರುವ ಲೋಕಸಭೆಯ ಚುನಾವಣೆಯಲ್ಲಿ ಪಟ್ಟಣದ ಪ್ರತಿಯೊಬ್ಬ ನಾಗರೀಕರು ತಪ್ಪದೇ ಮತದಾನ ಮಾಡುವ ಮೂಲಕ ತಮ್ಮ ಸಂವಿಧಾನಿಕ ಹಕ್ಕನ್ನು ಚಲಾಯಿಸುವ ಮೂಲಕ ಪ್ರಜಾತಂತ್ರ ವ್ಯವಸ್ಥೆಗೆ ಕೈಜೋಡಿಸಬೇಕೆಂದು ವಿನಂತಿಸಿದರು.

ಪಪುರಸಭೆಯ ಕಂದಾಯ ಅಧಿಕಾರಿ ಎಸ್. ಎನ್.ಪಾಟೀಲ, ಕಿರಿಯ ಅಭಿಯಂತರ ಎಸ್.ಎಂ.ಕಲಬುರ್ಗಿ, ಹಿರಿಯ ಆರೋಗ್ಯ ನಿರೀಕ್ಷಕ ಮಹಾಲಿಂಗ ಮೂಗಳಖೋಡ, ಲೇಖಪಾಲಕ ವ್ಹಿ.ಜಿ.ಕುಲಕರ್ಣಿ, ಕಿರಿಯ ಆರೋಗ್ಯನಿರೀಕ್ಷಕರಾದಸಿದ್ದುಅಳ್ಳಿಮಟ್ಟಿ,ರಾಜು ಹೂಗಾರ, ಸಿಬ್ಬಂದಿ ದುರ್ಗಪ್ಪ ಜಮಖಂಡಿ, ಲಕನ್ ದೊಡಮನಿ ಸೇರಿದಂತೆ ಪುರಸಭೆಯ ಪೌರಕಾರ್ಮಿಕರು ಇದ್ದರು.

**ಗಮನಸೆಳೆಯುತ್ತಿರುವಸೆಲ್ಫಿಕಾರ್ನರ್:** ಪುರಸಭೆ ಹಾಗೂ ತಾಲ್ಲೂಕು ಸ್ವಿಪ್ ಸಮಿತಿ ವತಿಯಿಂದ ಅಳವಡಿಸಿದ ಸೆಲ್ಫಿ ಸ್ಟ್ಯಾಂಡ್ ಒಳಗೆ ನಿಂತು ಸೆಲ್ಫಿ ಹಾಗೂ ಫೋಟೊ ತೆಗೆದುಕೊಳ್ಳಲು ಸಾರ್ವಜನಿಕರು ಮುಗಿಬೀಳುತ್ತಿದ್ದಾರೆ. ಸೆಲ್ಫಿ ಸ್ಟ್ಯಾಂಡ್‌ನಲ್ಲಿ ಲೋಕಸಭೆಯ ಚುನಾವಣೆಯ ಮಾಹಿತಿ ಇದ್ದು, ಸ್ಟ್ಯಾಂಡ್ ಮೇಲ್ಭಾಗದಲ್ಲಿ ಪುರಸಭೆ ಕಾರ್ಯಾಲಯ ಮಹಾಲಿಂಗಪುರ ಹಾಗೂ ಸಾರ್ವತ್ರೀಕ ಲೋಕಸಭಾ ಚುನಾವಣೆ–2024 ಕೆಳಗೆ ನಾನು ಹೆಮ್ಮೆಯ ಮತದಾರ ದೊಡ್ಡ ಬರಹವಿದ್ದು, ಅದರ ಕೆಳಗೆ ಚುನಾವಣಾ ಪರ್ವ ದೇಶ ಗರ್ವ, ನಾವು ಚೆನ್ನಾಗಿ ಆಡಿದರೆ ಈ ಸಲ ಕಪ್ ನಮ್ದೆ, ವೋಟು ಹಾಕದೆ ಇದ್ರೆ ಈ ಸಲ ತಪ್ ನಮ್ದೆ, ನೀವು ತಪ್ ಮಾಡಬೇಡಿ ತಪ್ಪದೇ ಬಂದು ಮೇ 7ಕ್ಕೆ ವೋಟು ಮಾಡಿ, ನನ್ನ ಮತ ನನ್ನ ಹಕ್ಕು, ನಾನು ನೈತಿಕ ಮತದಾನವನ್ನು ಬೆಂಬಲಿಸುತ್ತೇವೆ. ಮೇ 7ಕ್ಕೆ ಪ್ರಜಾಪ್ರಭುತ್ವದ ಹಬ್ಬವನ್ನು ಆಚರಿಸೋಣ ಎಂಬ ಬರಹಗಳು ಗಮನ ಸೆಳೆಯುತ್ತಿವೆ.

## "ವಿದೇಶದಲ್ಲಿ ಬೆರಣಿಯೇ ಇಂಧನ"



ಪ್ರಪಂಚದಲ್ಲಿ ಈ ಬೆರಣಿ ವಿದೇಶಿ ಗ್ರಾಮೀಣ ಜನಪ್ರಿಯ ಇಂದನವಾಗಿ ಮಾರ್ಪಟ್ಟಿದೆ ಬೆರಣಿಯನ್ನುವದು ಎಲ್ಲೋ ಸಿಗುವ ಬೆರಣಿ ಅಲ್ಲ ಅದು ನಮ್ಮ ನಮ್ಮ ಕೊಟ್ಟಿಗೆ–ಯ ಜಾಗದಲ್ಲಿ ಅಣಿ ಮಾಡಿರುವ ಹಸುಗಳ ಕೊಟ್ಟಿಗೆಯಿಂದ ಸಿಗುವ ಸಗಣಿಯೇ ಬೆರಣಿ, ಅತೀ ಸುಲಭವಾಗಿ ಬಡವರ ಬದುಕನ್ನು ನೀಗಿಸುವ ಹಸುವಿನ ಸಗಣಿಯನ್ನು ವಿದೇಶದಲ್ಲಿ ಬೆರಣಿಯನ್ನು ಸಂಗ್ರಹಿಸುವದರ ಮೂಲಕ ಅದನ್ನು ಅಡುಗೆ ಇಂಧನವಾಗಿ ಬಳಸುವದರ ಮೂಲಕ ಸುತ್ತ ಮುತ್ತಲಿನ ಪರಿಸರಕ್ಕೆ ಹಾನಿಯುಂಟು ಮಾಡದೆ ಆರೋಗ್ಯ ಪೂರ್ಣ ವಾತಾವರಣ ಕೊಡುವ ಈ ಬೆರಣಿಯನ್ನು ಭಾರತ ದೇಶದಿಂದ ಹಿಡಿದು ಇರಾನ ಚೀನಾ ಮ್ಯಾಂಗೋಲಿಯಾ ಮುಂತಾದ ದೇಶಗಳಲ್ಲಿ 200 ಕೋಟಿ ಅಧಿಕ ಜನರು ಇದನ್ನು ಉಪಯೋಗಿಸುತ್ತಿರುವದು ಶ್ಲಾಘನೀಯ, ವಿಶ್ವದಲ್ಲಿ ಅತೀ ಹೆಚ್ಚು ಗೋವಂಶವನ್ನು ಹೊಂದಿರುವ ಭಾರತ ದೇಶದಲ್ಲಿ ಗೋವಿನ ಬೆರಣಿಯನ್ನು ಅತೀ ಕಡಿಮೆ ಅವಧಿಗೆ ಸದ್ಬಳಕೆ ಮಾಡಿಕೊಳ್ಳುತ್ತಾರೆ.

**ರಾಜ್ಯ ವಿಶೇಷ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ವಾಯ್.ಸಿ.ಹಲಗಿ. ಶಿರೂರು.**



**ಮಹಾಲಿಂಗಪುರ : ಸ್ಥಳೀಯ ಕೆಂಗೇರಿಮಡ್ಡಿಯ 13 ಮತ್ತು 14 ನೇ ವಾರ್ಡಿನ ಸಾರ್ವಜನಿಕರು ಮಹಾಲಿಂಗಪುರ ಅರ್ಬನ್ ಬ್ಯಾಂಕಿನ ನೂತನ ಅಧ್ಯಕ್ಷ ಶೇಖರ ಅಂಗಡಿ ಅವರನ್ನು ಸನ್ಮಾನಿಸಿ ಗೌರವಿಸಿದರು. ಈರಪ್ಪ ದಿನ್ನಿಮನಿ, ಅಲ್ಲಪ್ಪ ಲೋಕಾಪೂರ, ಲಕ್ಷ್ಮಣ ಪಾಟೀಲ, ಹರೀಶ ನಾಯಕ ಸೇರಿದಂತೆ ಹಲವರು ಇದ್ದರು.**

## ಮೇ.20 ರಿಂದ 25ರವರೆಗೆ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ

**ಬೆಳಗಾವಿ :** ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಧಾರವಾಡ, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ ಹಾಗೂ ಕೆ.ಎಲ್.ಎಸ್. ಇನಸ್ಟಿಟ್ಯೂಟ್ ಆಫ್ ಮ್ಯಾನೆಜಮೆಂಟ್ ಎಜುಕೇಶನ್ &ರಿಸರ್ಚ್,ಬೆಳಗಾವಿ ಕೆ.ಎಲ್.ಎಸ್. ಇನಸ್ಟಿಟ್ಯೂಟ್ ಆಫ್ ಮ್ಯಾನೆಜಮೆಂಟ್ ಎಜುಕೇಶನ್ & ರಿಸರ್ಚ್ (ಖಒಇಖ) ಅವರ ಸಯುಕ್ತ ಆಶ್ರಯದಲ್ಲಿ ಬೆಳಗಾವಿಯ ಹಿಂದವಾಡಿನಲ್ಲಿ ಮೇ.20 ರಿಂದ ಮೇ.25ರವರೆಗೆ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

6 ದಿನಗಳ ಈ ತರಬೇತಿ ಕಾರ್ಯಕ್ರಮವು ಅಂತರಾಷ್ಟ್ರೀಯ ವ್ಯವಹಾರದ ಮಾಹಿತಿಯನ್ನು ನೀಡುವ ಉದ್ದೇಶವನ್ನು ಹೊಂದಿರುತ್ತದೆ. ರಫ್ತು ಅಂದರೇನು? ಏಕೆ? ಎಲ್ಲಿಗೆ? ಹಾಗೂ ಹೇಗೆ ಮಾಡಬೇಕೆಂಬುದರ ಬಗ್ಗೆ, ರಫ್ತಿಗೆ ಸಂಬಂಧಿಸಿದಂತೆ ನಿಯಮಾವಳಿಗಳು, ಅಂತರಾಷ್ಟ್ರೀಯ ರಫ್ತು ವ್ಯಾಪಾರ, ರಫ್ತು ಮಾರುಕಟ್ಟೆ, ರಫ್ತಿಗೆ ಸಂಬಂಧಿತ ಕೇಂದ್ರ ಸರ್ಕಾರದ ಸಂಸ್ಥೆಗಳಾದ ಡಿ.ಜಿ.ಎಫ್.ಟಿ., ಕಸ್ಟಮ್ಸ್, ಆರ್.ಬಿ.ಐ. ಹಾಗೂ ರಫ್ತು ಉತ್ತೇಜನ ಕೌನ್ಸಿಲ್‌ಗಳಾದ ಅಪೇಡಾ, ಫಿಯೋ ಇತ್ಯಾದಿ, ರಫ್ತು ಪ್ಯಾಕೇಜಿಂಗ್, ಹಣಕಾಸು, ವಿದೇಶಿ ವಿನಿಮಯ, ಇ.ಸಿ.ಜಿ.ಸಿ., ಇ–ವಾಣಿಜ್ಯ ವೇದಿಕೆ ಹಾಗೂ ಜಿ.ಎಸ್.ಟಿ. ನಿಯಮಗಳ ಕುರಿತಾಗಿಯೂ ವಿಷಯ ಮಂಡನೆ ಮಾಡಲಾಗುವುದು ಹಾಗೂ ಉತ್ತರ ಕರ್ನಾಟಕದ ರಫ್ತು ಸಾಧ್ಯತಾ ಉತ್ಪನ್ನಗಳ ಕುರಿತು ಮಾಹಿತಿಯನ್ನು ಹಾಗೂ ಆಯಾ ಕ್ಷೇತ್ರಗಳಲ್ಲಿ ಸಾಕಷ್ಟು ಅನುಭವ ಹೊಂದಿರುವ /ಸೇವೆ ಸಲ್ಲಿಸುತ್ತಿರುವ ಪರಿಣಿತಿದಾರರು ಅತಿಥಿ ಉಪನ್ಯಾಸಕರಾಗಿ ಪಾಲ್ಗೊಂಡು ಮಾಹಿತಿ ನೀಡಲಿದ್ದಾರೆ.

ರಫ್ತು ವ್ಯವಹಾರ ಪ್ರಾರಂಭಿಸಲಿಚ್ಛಿಸುವವರು, ಹಾಲಿ ರಫ್ತುದಾರರು, ವ್ಯಾಪಾರ ಹಾಗೂ ಉತ್ಪಾದನಾ ಚಟುವಟಿಕೆಗಳಲ್ಲಿ ನಿರತರಾದವರು. ರಫ್ತು ಚಟುವಟಿಕೆಯಲ್ಲಿ ಪಾಲ್ಗೊಳ್ಳಲಿಚ್ಛಿಸುವ ಉದ್ದಿಮೆದಾರರು ಹಾಗೂ ರಫ್ತು ವ್ಯವಹಾರ ಕುರಿತು ಬೋಧನೆಯಲ್ಲಿ ನಿರತವಾಗಿರುವ ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರಫ್ತು ವ್ಯವಹಾರದಲ್ಲಿ ಆಸಕ್ತಿ ಹೊಂದಿದ ವಿದ್ಯಾರ್ಥಿಗಳಿಗೆ ಈ ತರಬೇತಿ ಕಾರ್ಯಕ್ರಮವು ಅತ್ಯಂತ ಉಪಯೋಗಕಾರಿಯಾಗಿದೆ. ಈ ತರಬೇತಿಯು ವಸತಿ ರಹಿತವಾಗಿದ್ದು, ಆಸಕ್ತಿಯುಳ್ಳವರು ಶಿಬಿರಾರ್ಥಿಗಳಾಗಿ ಪಾಲ್ಗೊಳ್ಳಬಹುದಾಗಿದೆ.

ಆಸಕ್ತರು ಮೇ.20 ಒಳಗಾಗಿ ತರಬೇತಿ ಶುಲ್ಕ ರೂ.3.540 ಭರ್ತಿ ಮಾಡಿ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಾಲತಾಣ: www.vtpc.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ವಿಶ್ವೇಶ್ವರಯ್ಯಾ ವ್ಯಾಪಾರ ಉತ್ತೇಜನ ಕೇಂದ್ರ, 1ನೇ ಮಹಡಿ, ಡಿ.ಐ.ಸಿ ಕಟ್ಟಡ, ರಾಯಾಪುರ, ಧಾರವಾಡ, ಮೋಬೈಲ್ ಸಂಖ್ಯೆ: 8073707446 (ಟಿ.ಎಸ್. ಮಲ್ಲಿಕಾರ್ಜುನ) 9742709229 (ವಿಶ್ವನಾಥ ಸೂಸಿಮಠ), ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಉದ್ಯಮ ಭಾಗ, ಬೆಳಗಾವಿ ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳ ಅಭ್ಯರ್ಥಿಗಳು ಆಯಾ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಗಳನ್ನು ಸಂಪರ್ಕಿಸಬಹುದು ಎಂದು ಧಾರವಾಡ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಸಹಾಯಕ ನಿರ್ದೇಶಕರು ಪ್ರಟಕಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾ ಕಾಂಗ್ರೆಸ್ ಪಕ್ಷದ ಪ.ಜಾ ವಿಭಾಗದ ಕಾರ್ಯದರ್ಶಿಯಾಗಿ ಧರ್ಮರಾಜ ಹೊಸೂರ ನೇಮಕ




**ವಿಜಯಪುರ :** ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಹೊಸೂರ ಗ್ರಾಮದ ಧರ್ಮರಾಜ ಶಿವಪ್ಪ ಹೊಸೂರ ಅವರನ್ನು ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ವಿಭಾಗದ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ ರಾಜ್ಯಾಧ್ಯಕ್ಷರಾದ ಧರ್ಮಸೇನ ರವರು ಆದೇಶದ ಮೇರೆಗೆ ನೇಮಕ ಮಾಡಲಾಗಿದೆ.

ಧರ್ಮರಾಜ ಶಿವಪ್ಪ ಹೊಸೂರ ಅವರಿಗೆ ರಾಜು ಆಲಗೂರ ಹಾಗೂ ಹಮೀದ್ ಮುಶ್ರೀಫ, ಅಬ್ದುಲ ರಜಾಕ ಹೊರ್ತಿ, ಸುಭಾಸ ಕಾಲೇಬಾಗ ಅವರು ಆದೇಶ ಪತ್ರ ನೀಡಿದರು.

ಕೂಡಲೇ ಅಧಿಕಾರ ವಹಿಸಿಕೊಂಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಮಾರ್ಗದರ್ಶನದಲ್ಲಿ ತಮ್ಮ ಸ್ಥಳೀಯ ನಾಯಕರ ಸಹಯೋಗದಲ್ಲಿ ಪಕ್ಷದ ಸಂಘಟನೆ ಮತ್ತ ಬಲವರ್ಧನೆಗೆ ಕಾರ್ಯೋನ್ಮುಖರಾಗಬೇಕೆಂದು ಸೂಚಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷ (ಪರಿಶಿಷ್ಟ ಜಾತಿ ವಿಭಾಗ) ವಿಜಯಪುರದ ಜಿಲ್ಲಾಧ್ಯಕ್ಷರಾದ ರಮೇಶ ಗುಬ್ಬೇವಾಡ ತಿಳಿಸಿದ್ದಾರೆ.

## ದಾಖಲೆ ನಿರ್ಮಿಸಿದ ಜಿತೋ ಅಹಿಂಸಾ ರನ್




**ಬೆಳಗಾವಿ :** ಜೈನ ಇಂಟರ್‌ನ್ಯಾಷನಲ್ ಟ್ರೆಡ್ ಆರ್ಗನೈಝೇಶನ ಜಿತೋ ಬೆಳಗಾವಿ ಪರಿವಾರ ವತಿಯಿಂದ ಹಮ್ಮಿಕೊಳ್ಳಲಾದ ಜಿತೋ ಅಹಿಂಸಾ ರನ್ ಮ್ಯಾರಾಥಾನ ಓಟ ಇಂದು ಬೆಳಗಾವಿಯಲ್ಲಿ ದಾಖಲೆಯನ್ನು ನಿರ್ಮಿಸಿದೆ.

ಮಾರ್ಚ 31 ರಂದು ಬೆಳಿಗ್ಗೆ ಕ್ಯಾಂಪ ಪ್ರದೇಶದಲ್ಲಿರುವ ವಿದ್ಯಾನಿಕೇತನ ಶಾಲಾ ಮೈದಾನದಲ್ಲಿ ಈ ಮ್ಯಾರಾಥಾನ ಓಟ ಪ್ರಾರಂಭಗೊಂಡಿತು. 3 ಕಿಮಿ. ಓಟ , 5 ಕಿಮಿ ಮತ್ತು 10 ಕಿಮಿ ಸ್ಪರ್ಧಾತ್ಮಕ ಓಟಗಳು ನಡೆದವು. ಒಟ್ಟಾರೆ ಓ ಮ್ಯಾರಾಥಾನ ಸ್ಪರ್ಧೆಯಲ್ಲಿ 2300 ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಗೋಮಟೇಶ ವಿದ್ಯಾಪೀಠ ಅಧಿಷ್ಠಾತಾ ಸಂಜಯ ಪಾಟೀಲ, ಹಿರಿಯ ನ್ಯಾಯವಾದಿ ರವಿರಾಜ ಪಾಟೀಲ, ಮ್ಯಾರಾಥಾನ ಓಟದ ಪ್ರಮುಖ ಪ್ರಾಯೋಜಕರಾದ ಶ್ರೀ ಆರ್ಥೊ ಮತ್ತು ಟ್ರಾಮಾ ಸೆಂಟರ್‌ನ ಡಾ. ದೇವೆಗೌಡ, ಓರಿಯನ್ ಸಂಸ್ಥೆಯ ತವನಪ್ಪ ಪಾಲಕರ, ಪ್ರದೀಪ ಹೊಸಮನಿ ಮೊದಲಾದ ಅತಿಥಿ ಗಣ್ಯರು ಮ್ಯಾರಾಥಾನ ಓಟ–ಕ್ಕೆ ಚಾಲನೆ ನೀಡಿದರು.ಈ ಓಟದಲ್ಲಿ ಚಿಕ್ಕಮಕ್ಕಳು, ವಿದ್ಯಾರ್ಥಿಗಳು, ಯುವಕರು–ಯುವತಿಯರು ಮಹಿಳೆಯರು, ಹಿರಿಯ ನಾಗರಿಕರು ಭಾಗವಹಿಸಿದ್ದರು.

ಪ್ರಶಸ್ತಿ ಪ್ರದಾನ: ಜಿತೋ ಅಹಿಂಸಾ ರನ್ ಮ್ಯಾರಾಥಾನ ಓಟದಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಿಗೆ ಪ್ರಶಸ್ತಿಗಳನ್ನು ವಿತರಿಸಲಾಯಿತು. ಈ ಸಮಾರಂಭದಲ್ಲಿ ಜಿತೋ ಅಧ್ಯಕ್ಷ ವೀರಧವಲ ಉಪಾಧ್ಯೆ ಅತಿಥಿಗಳನ್ನು ಸ್ವಾಗತಿಸಿದರು. ಜಿತೋ ಲೇಡಿಂಜ ವಿಂಗ ಅಧ್ಯಕ್ಷೆ ಮಾಯಾ ಜೈನ ಪ್ರಾಸ್ತಾವಿಕವಾಗಿ ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದ ಮಾಜಿ ಶಾಸಕ ಸಂಜಯ ಪಾಟೀಲ, ಹಿರಿಯ ನ್ಯಾಯವಾದಿ ರವಿರಾಜ ಪಾಟೀಲ ಕೆಕೆಜಿ ವಲಯ ಸಂಯೋಜಕ ಸಂತೋಷ ಪೋರವಾಲ ಅವರು ಮಾತನಾಡಿ, ಜಿತೋ ಸಂಸ್ಥೆಯ ಕೈಗೊಂಡ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಇದೇ ಸಂದರ್ಭದಲ್ಲಿ ಮ್ಯಾರಾಥಾನ ಓಟದ ಪ್ರಾಯೋಜ–ಕರಾದ ಡಾ. ದೇವೆಗೌಡ, ಪಾಲಕರ, ಪ್ರದೀಪ ಹೊಸಮನಿ, ಹಾಗೂ ಇನ್ನಿತರರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರಶಸ್ತಿ ವಿಜೇತರು: 10 ಕಿಮಿ ಓಟದಲ್ಲಿ 16–34 ಮಯೋಮಾನ ಪುರುಷ ವಿಭಾಗ ಪ್ರಥಮ ಸ್ಥಾನ ಸುರೇಶ ಬಾಳೆಕುಂದ್ರಿ, 35–49 ಮಯೋಮಾನ ಪುರುಷ ವಿಭಾಗ ಪ್ರಥಮ ಸ್ಥಾನ ವಿನಾಯಕ ಜಾಂಬೋಟಕರ, 50 ವರ್ಷ ಮೇಲ್ಪಟ್ಟ ಪುರುಷ ವಿಭಾಗ ಪ್ರಥಮ ಸ್ಥಾನ ರಾಧಾಕೃಷ್ಣ ನಾಯ್ಡು, 16 ವರ್ಷದೊಳಗಿನ ವಯೋಮಾನ ಪುರುಷ ವಿಭಾಗ ಪ್ರಥಮ ಸ್ಥಾನ ಸಮರ್ಥ ಹಿರೇಮಠ,

5 ಕಿಮಿ ಓಟ 16–34 ಮಯೋಮಾನ ಪುರುಷ ವಿಭಾಗ ಪ್ರಥಮ ಸ್ಥಾನ ಬಾಬು ಚೌಗುಲಾ, 35–49 ಮಯೋಮಾನ ಪುರುಷ ವಿಭಾಗ ಪ್ರಥಮ ಸ್ಥಾನ ಅನಿಷ ಲುಕೆ, 50 ವರ್ಷ ಮೇಲ್ಪಟ್ಟ ಪುರುಷ ವಿಭಾಗ ಪ್ರಥಮ ಸ್ಥಾನ ಚಂದ್ರಕಾಂತ ಕಡೋಲಕರ ಹಾಗೂ 16 ವರ್ಷದೊಳಗಿನ ವಯೋಮಾನ ಪುರುಷ ವಿಭಾಗ ಪ್ರಥಮ ಸ್ಥಾನ ಯಶ ಗುಗ್ಗರಟ್ಟಿ ಇವರು ಪ್ರಶಸ್ತಿ ಪಡೆದುಕೊಂಡರು.

ಅದರಂತೆ 10 ಕಿಮಿ ಓಟ 16–34 ಮಯೋಮಾನ ಮಹಿಳಾ ವಿಭಾಗ ಪ್ರಥಮ ಸ್ಥಾನ ವಿದುಲಾ ಜೈನ, 10 ಕಿಮಿ ಓಟ 35–49 ಮಯೋಮಾನ ಮಹಿಳಾ ವಿಭಾಗ ಪ್ರಥಮ ಸ್ಥಾನ ಶೀತಲ ಎಸ್. ಕೆ., 16 ವರ್ಷದೊಳಗಿನ ವಯೋಮಾನ ಮಹಿಳಾ ವಿಭಾಗ ಪ್ರಥಮ ಸ್ಥಾನ – ನಿರವಿ ಕಲಕುಪ್ಪಿ, 5 ಕಿಮಿ ಓಟ 16–34 ಮಯೋಮಾನ ಮಹಿಳಾ ವಿಭಾಗ ಪ್ರಥಮ ಸ್ಥಾನ ದಿವ್ಯಾ ಹೇರೆಕರ, 5 ಕಿಮಿ ಓಟ 35–49 ಮಯೋಮಾನ ಮಹಿಳಾ ವಿಭಾಗ ಪ್ರಥಮ ಸ್ಥಾನ– ಕಿರ್ತಿ ಮಲ್ಲಾಪೂರ,5 ಕಿಮಿ ಓಟ 50 ವರ್ಷ ಮೇಲ್ಪಟ್ಟ ಮಹಿಳಾ ವಿಭಾಗ ಪ್ರಥಮ ಸ್ಥಾನ ರಾಜಶ್ರೀ ಬಾಳೋಜಿ ಹಾಗೂ 16 ವರ್ಷದೊಳಗಿನ ವಯೋಮಾನ ಮಹಿಳಾ ವಿಭಾಗ ಪ್ರಥಮ ಸ್ಥಾನ– ಸ್ನೇಹಾ ಹಿರೋಜಿ ಇವರು ಪ್ರಶಸ್ತಿ ಪಡೆದುಕೊಂಡರು.

ವೇದಿಕೆ ಮೇಲೆ ಮ್ಯಾರಾಥಾನ ಓಟದ ಬೆಳಗಾವಿ ವಲಯ ಸಂಯೋಜಕ ವಿಕ್ರಮ ಜೈನ, ಮ್ಯಾರಾಥಾನ ಸಂಯೋಜಕಿ ಕೀರ್ತಿ ದೊಡ್ಡಣ್ಣವರ, ಸಹ ಸಂಯೋಜಕಿ ಮಯೂರಾ ಪಾಟೀಲ, ಜಿತೋ ಯುಥ ವಿಂಗ ಅಧ್ಯಕ್ಷ ದೀಪಕ ಸುಬೇದಾರ, ಮೊದಲಾದವರು ಉಪಸ್ಥಿತರಿದ್ದರು. ಜಿತೋ ಲೇಡಿಜ ಕಾರ್ಯದರ್ಶಿ ಮಮತಾ ಜೈನ ವಂದಿಸಿದರು. ಅಭಯ ಆದಿಮನಿ ಕಾರ್ಯಕ್ರಮ ನಿರೂಪಿಸಿದರು.

## ಮೂಡಲಗಿ ಲಯನ್ಸ್ ಕ್ಲಬ್‌ಗೆ ಬ್ಯಾಡ್ಮಿಂಟನ್ ಚಾಂಪಿಯನ್

**ಮೂಡಲಗಿ :** ಇಲಕಲ್ ಲಯನ್ಸ್ ಕ್ಲಬ್ ಆತಿಥ್ಯದಲ್ಲಿ ಜರುಗಿದ ಲಯನ್ಸ್ ಕ್ಲಬ್ ಜಿಲ್ಲಾ ಮಟ್ಟದ ಷಟಲ್ ಬ್ಯಾಡ್ಮಿಂಟನ್‌ಟೂರ್ನಿಯಲ್ಲಿ ಮೂಡಲಗಿಯ ಲಯನ್ಸ್ ಕ್ಲಬ್ ಪರಿವಾರವು ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿವೆ.



ಮೂಡಲಗಿ ಲಯನ್ಸ್ ಕ್ಲಬ್‌ನ ಶಿವಾನಂದ ಗಾಡವಿ ಮತ್ತು ಶಿವಬಸು ಈಟಿ ತಂಡವು ಗೋವಾ ಲಯನ್ಸ್‌ಕ್ಲಬ್‌ದ ಶಶಿಧರ ಮತ್ತು ಸಾಮ್ರಾಟ್ ತಂಡವನ್ನು ನೇರ ಎರಡು ಸೆಟ್‌ಗಳಿಂದ ಪರಾಭವಗೊಳಿಸಿದರೆ ಇನ್ನೊಂದು ಸೆಮಿಫೈನಲದಲ್ಲಿ ಮೂಡಲಗಿಕ್ಲಬ್‌ದಅಪ್ಪಣ್ಣ ಬಡಿಗೇರ ಮತ್ತು ಸಂಗಮೇಶ ಆತಿಥ್ಯದ ಇಲಕಲ್ ಕ್ಲಬ್‌ದ ನರಸಿಂಹ ಹಾಗೂ ಡಾ. ಅಕ್ಕಿ ತಂಡವನ್ನು ನೇರ ಎರಡು ಸೆಟ್‌ಗಳಲ್ಲಿ ಪರಾಭವಗೊಳಿಸಿ ಅಂತಿಮ ಹಂತಕ್ಕೆ ಪ್ರವೇಶ ಪಡೆದುಕೊಂಡರು.

ಅಂತಿಮ ಪಂದ್ಯದಲ್ಲಿ ಶಿವಾನಂದ ಗಾಡವಿ ಮತ್ತು ಶಿವಬಸು ಈಟಿ ಜೋಡಿ ಹಾಗೂ ಅಪ್ಪಣ್ಣ ಬಡಿಗೇರ ಮತ್ತು ಸಂಗಮೇಶ ಜೋಡಿಯನ್ನು ನೇರವಾದ ಎರಡು ಸೆಟ್‌ಗಲಿಂದ ಹಣಿದು

ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಪಡೆದುಕೊಂಡವು. ಆತಿಥ್ಯ ಇಲಕಲ್ ಕ್ಲಬ್ ತಂಡವು ತೃತೀಯ ಸ್ಥಾನವನ್ನು ಪಡೆದುಕೊಂಡಿತು.

## ಲೋಕಸಭಾ ಚುನಾವಣಾ ಪ್ರಯುಕ್ತ ರಂಗೋಲಿ ಸ್ಪರ್ಧೆ




**ಬೆಳಗಾವಿ :** ತಾಲ್ಲೂಕಿನ ಸಾಂಬ್ರಾ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ಗ್ರಾಮ ಪಂಚಾಯತಿ ವತಿಯಿಂದ ಬುಧವಾರ ಎಪ್ರಿಲ್.3 ರಂದು ಲೋಕಸಭಾ ಚುನಾವಣಾ ಅಂಗವಾಗಿ ರಂಗೋಲಿ ಸ್ಪರ್ಧೆ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲ್ಲೂಕು ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮರಡ್ಡಿ ಪಾಟೀಲ್, ಸಹಾಯಕ ನಿರ್ದೇಶಕರಾದ (ಪ.ರಾ)ಗಣೇಶ ಕೆ.ಎಸ್. ಗ್ರಾಮ ಪಂಚಾಯತಿ ಸಿಬ್ಬಂದಿಗಳು ಹಾಗೂ ಇತರರು ಇದ್ದರು.

## ಮಹಿಳಾ ಕಾಂಗ್ರೆಸ್ ಮುಖಂಡರಿಂದ ಪಾಲಾಕ್ಷಪ್ಪ ಗುಂಗಾಡಿಗೆ ಸನ್ಮಾನ

**ಕೊಪ್ಪಳ :** ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಅವರ ನಿಸ್ವಾರ್ಥ ಸೇವೆ ಮತ್ತು ಸ್ಥಳಿಯ ಶಾಸಕ ರಾಘವೇಂದ್ರ ಹಿಟ್ನಾಳ ಅವರ ಅವಿರತ ಸೇವೆ ಪರಿಗಣಿಸಿ ಕಾಂಗ್ರೆಸ್ ಸೇರಿದ ಬಿಜೆಪಿ ಮುಖಂಡ ತಾಲೂಕ ಪಂಚಾಯತಿ ಮಾಜಿ ಸದಸ್ಯ ಹುಲಗಿಯ ಪಾಲಾಕ್ಷಪ್ಪ ಗುಂಗಾಡಿ ಅವರನ್ನು ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜ್ಯೋತಿ ಎಂ. ಗೊಂಡಬಾಳ ನೇತೃತ್ವದಲ್ಲಿ ಸನ್ಮಾನಿಸಿ ಸ್ವಾಗತಿಸಿದರು.



ತಾಲ್ಲೂಕಿ ಹುಲಗಿ ಗ್ರಾಮದಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ಮತ್ತು ಲೋಕಸಭೆ ಅಭ್ಯರ್ಥಿ ರಾಜಶೇಖರ್ ಹಿಟ್ನಾಳ ಸಮ್ಮುಖದಲ್ಲಿ ಸಾಕಷ್ಟು ಅಭಿಮಾನಿಗಳ ಜೊತೆಗೆ ಪಕ್ಷಕ್ಕೆ ಸೇರ್ಪಡೆಗೊಂಡ ಸಂದರ್ಭದಲ್ಲಿ ಅವರನ್ನು ಕೊಪ್ಪಳ ಜಿಲ್ಲಾ ಮಹಿಳಾ ಕಾಂಗ್ರೆಸ್ ವತಿಯಿಂದ ಸನ್ಮಾನಿಸಿ ಸ್ವಾಗತಿಸಿದರು.

ತಾಲೂಕ ಪಂಚಾಯತಿ ಸದಸ್ಯರಾಗಿ, ಸ್ಥಳಿಯ ಹುಲಿಗೆಮ್ಮ ದೇವಸ್ಥಾನಕ್ಕೆ, ಗ್ರಾಮ ಪಂಚಾಯತಿಗೆ ಸುಧೀರ್ಘವಾಗಿ, ಜನಪರವಾಗಿ ಸೇವೆ ಮಾಡಿರುವ ಇವರ ಸೇರ್ಪಡೆಯಿಂದ ಬಂಡಿಹರ್ಲಾಪೂರ ಮತ್ತು ಹಿಟ್ನಾಳ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಕಾಂಗ್ರೆಸ್‌ಗೆ ಮತ್ತಷ್ಟು ಬಲ ಬಂದಿದೆ ಎಂದು ಜ್ಯೋತಿ ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರುಗಳಾದ ಮಾಜಿ ಶಾಸಕ ಕೆ. ಬಸವರಾಜ ಹಿಟ್ನಾಳ, ಜನಾರ್ಧನ ಹುಲಗಿ, ಎಸ್. ಬಿ. ನಾಗರಳ್ಳಿ, ಕಾಟನ್ ಪಾಶಾ, ರಾಜಶೇಖರ್ ಆಡೂರ, ಶರಣಪ್ಪ ಸಜ್ಜನ್,

ಎಸ್.ಟಿ. ಘಟಕ ತಾಲೂಕ ಅಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ, ತಾಲೂಕ ಕೆಡಿಪಿ ಸದಸ್ಯೆ ನಾಗರತ್ನ ಹುಲಗಿ, ಸುಮಂಗಲಾ ನಾಯಕ್, ಅಕ್ಬರ್ ಪಾಶಾ,

ಪ್ರಸನ್ನ ಗಡಾದ, ಬಾಲಚಂದ್ರ ಶ್ಯಾಮುಯೇಲ್, ವಿಶ್ವನಾಥ ರಾಜು, ಚನ್ನಕೇಶವ ಬಂಡಿಹರ್ಲಾಪೂರ,

ತೋಟಪ್ಪ ಕಾಮನೂರ, ವೀರಣ್ಣ ಗಾಣಗೇರ, ಭರಮಪ್ಪ ನಗರ, ರವಿ ಕುರಗೋಡ ಇತರರು ಇದ್ದರು.

## ಲೋಕಸಭಾ ಚುನಾವಣೆ: ಪ್ರಿಂಟಿಂಗ್ ಪ್ರೆಸ್ ಮಾಲೀಕರ & ಪ್ರತಿನಿಧಿಗಳ ಸಭೆ

## ಕರ ಪತ್ರ, ಪಲಕ, ಪೋಸ್ಟರ್‌ಗಳ ಮುದ್ರಣದಲ್ಲಿ ಮುದ್ರಕರ ಹಾಗೂ ಪ್ರಕಾಶಕರ ಮಾಹಿತಿ ಕಡ್ಡಾಯ: ನಲಿನ್ ಅತುಲ್

**ಕೊಪ್ಪಳ :** ಲೋಕಸಭಾ ಚುನಾವಣೆ–2024ರ ಮಾದರಿ ನೀತಿ ಸಂಹಿತೆ ಜಾರಿಯಾಗಿರುವ ಹಿನ್ನೆಲೆಯಲ್ಲಿ, ರಾಜಕೀಯ ಪಕ್ಷಗಳ ಮತ್ತು ರಾಜಕೀಯ ಅಭ್ಯರ್ಥಿಗಳ ಕರಪತ್ರ, ಪಲಕಗಳು, ಪೋಸ್ಟರ್‌ಗಳಲ್ಲಿ ಮುದ್ರಕರು, ಪ್ರಕಾಶಕರು ಹಾಗೂ ಮುದ್ರಣದ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.



ಲೋಕಸಭಾ ಚುನಾವಣೆ–2024ರ ಪ್ರಯುಕ್ತ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಪ್ರಿಂಟಿಂಗ್ ಪ್ರೆಸ್ ಮಾಲೀಕರು ಮತ್ತು ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ರೀತಿಯ ಅಪಪ್ರಚಾರ, ಸುಳ್ಳು ಮಾಹಿತಿಯ, ಕೋಮುಸೌರ್ಹದತೆಗೆ ದಕ್ಕೆ ತರುವ ಕರಪತ್ರ, ಪಲಕಗಳು, ಪೋಸ್ಟರ್ ಮತ್ತು ಬ್ಯಾನರಗಳನ್ನು ಮುದ್ರಿಸಲು ಅವಕಾಶವಿರುವುದಿಲ್ಲ. ಈ ಹಿನ್ನಲೆಯಲ್ಲಿ ಪ್ರಿಂಟಿಂಗ್ ಪ್ರೆಸ್ ಮಾಲೀಕರು ಮತ್ತು ಪ್ರತಿನಿಧಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಮುದ್ರಕರು ಪಾಂಪ್ಲೇಟಗಳು ಮತ್ತು ಪೋಸ್ಟರ್ ಗಳನ್ನು ಮುದ್ರಿಸುವ ಮೊದಲು ಮುದ್ರಣಕ್ಕೆ ನೀಡುವವರ ಗುರುತಿನ ಬಗ್ಗೆ ದೃಢೀಕರಣವನ್ನು ಇಬ್ಬರು ಅನುಮೋದಕರೊಂದಿಗೆ ಪಡೆದಿರಲೇಬೇಕು. ಗುರುತಿನ ದೃಢೀಕರಣವಿಲ್ಲದೇ ಮುದ್ರಣ ಮಾಡಬಾರದು. ಯಾವುದೇ ಜಾತ್ರೆ ಮತ್ತು ಧಾರ್ಮಿಕ ಕಾರ್ಯಕ್ರಮಗಳಿಗೆ ಮುದ್ರಣವಾಗುವ ಕರಪತ್ರಗಳಲ್ಲಿ ಅಭ್ಯರ್ಥಿಗಳ ಭಾವಚಿತ್ರ ಹಾಕಬಾರದು ಎಂದು ಸೂಚಿಸಿದರು.

ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯನುಸಾರ ಬ್ಯಾನರ್, ಫ್ಲೆಕ್ಸ್, ಕರಪತ್ರ ಮುದ್ರಣವಾಗದೇ ನಿಯಮವನ್ನು ಉಲ್ಲಂಘಿಸಿದಲ್ಲಿ ಪ್ರಜಾಪ್ರತಿನಿಧಿ ಕಾಯ್ದೆ 127 ಎ ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಆದ್ದ–ರಿಂದ ಎಲ್ಲಾ ಪ್ರಿಂಟಿಂಗ್ ಪ್ರೆಸ್ ನವರು ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಮುದ್ರಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ ಅವರು ಮಾತನಾಡಿ, ಕರಪತ್ರ, ಫಲಕ ಪೋಸ್ಟರ್ ಬ್ಯಾನರ್ ಮುಂಭಾಗದಲ್ಲಿ ಮುದ್ರಕರ ಹೆಸರು, ಪ್ರಕಾಶಕರ ಹೆಸರು, ಮೊಬೈಲ್ ಸಂಖ್ಯೆ ಮತ್ತು ಮುದ್ರಣ ಪ್ರತಿಗಳ ಸಂಖ್ಯೆ ನಮೂದಿಸಬೇಕು. ಯಾವುದೇ ಜಾತಿ, ಧರ್ಮದ ಜನರ ಭಾವನೆಗೆ ಧಕ್ಕೆ ತರುವ ವಿಷಯವನ್ನು ಮುದ್ರಿಸಬಾರದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಚುನಾವಣಾ ವಿಭಾಗದ ರವಿಕುಮಾರ ವಸ್ತದ್, ಜಿಲ್ಲಾ ವಾರ್ತಾಧಿಕಾರಿ ಕೆ.ಎನ್. ರಮೇಶ ಸೇರಿದಂತೆ ಜಿಲ್ಲೆಯ ವಿವಿಧ ಪ್ರಿಂಟಿಂಗ್ ಪ್ರೆಸ್ ಮಾಲೀಕರು ಮತ್ತು ಪ್ರತಿನಿಧಿಗಳು ಇದ್ದರು.

## ಲೋಕಸಭಾ ಚುನಾವಣೆಯಲ್ಲಿ ನರೇಗಾ ಕೂಲಿಕಾರರು ಕಡ್ಡಾಯವಾಗಿ ಮತ ಚಲಾಯಿಸಿರಿ

**ಕೊಪ್ಪಳ :** ಮತದಾನ ಎನ್ನುವದು ಪವಿತ್ರಕಾರ್ಯ.ಪ್ರಜಾಪ್ರಭುತ್ವದಲ್ಲಿ ಮತ ಚಲಾವಣೆಗೆ ಅವಕಾಶ ಇರುವುದು ಸಂವಿಧಾನವು ನಮಗೆ ನೀಡಿದ ದೊಡ್ಡ ಕೊಡುಗೆಯಾಗಿದೆ ಎಂದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯಅವರುಹೇಳಿದರು.



ಗುರುವಾರದಂದು ಕೊಪ್ಪಳ ತಾಲೂಕಿನ ಬಂಡಿಹರ್ಲಾಪುರ ಗ್ರಾಮ ಪಂಚಾಯತಿಯ ಬಿ ಹೊಸಳ್ಳಿ ಗ್ರಾಮದ ಕೆರೆ ಕಾಮಗಾರಿ ಸ್ಥಳದಲ್ಲಿ ಜಿಲ್ಲಾ ಸ್ವೀಪ್ ಸಮಿತಿ ಹಾಗೂ ತಾಲೂಕು ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮತದಾರರಿಗೆ ಸ್ವೀಪ್ ಕಾರ್ಯಕ್ರಮವನ್ನು ಉದ್ದೇಶಿಸಿ ಅವರುಮಾತನಾಡಿದರು

ಮೇ–7ರಂದು ಜರುಗುವ ಚುನಾವಣೆಯಲ್ಲಿ ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವದರ ಮೂಲಕ ಸುಭದ್ರ ದೇಶವನ್ನಾಗಿ ನಿರ್ಮಿಸೋಣ. ಮತದಾನ ದಿನದಂದುನಾವುಸಮಯವ್ಯರ್ಥ ಮಾಡದೇ ಚುನಾವಣೆ ಆಯೋಗ ನಿಗದಿಪಡಿಸಿದದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ನಮಗೆ ಸೂಕ್ತ ಎನಿಸುವ ವ್ಯಕ್ತಿಗೆ ಮತ ಚಲಾಯಿಸಬೇಕು. ಸ್ವೀಪ್ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದ್ದು,ನರೇಗಾ ಕೂಲಿಕಾರರು ಮತದಾನ ಮಾಡಿ ಇತರರಿಗೆ ಮಾದರಿಯಾಗ ಬೇಕೆ–ಂದುಕರೆನೀಡಿದರು.

ಕಳೆದ ಬಾರಿಗಿಂತ ಈ ಬಾರಿ ವಿನೂತನವಾಗಿ ಸ್ವೀಪ್ ಕಾರ್ಯಕ್ರಮಗಳನ್ನು ಜರುಗಿಸುವ ಮೂಲಕ ಜಿಲ್ಲೆಯ ಮತದಾನ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ನಾವೆಲ್ಲರೂ ಚುನಾವಣಾ ಆಯೋಗದೊಂದಿಗೆ ಕೈ ಜೋಡಿಸೋಣ. ಸ್ವೀಪ್ ಕಾರ್ಯಕ್ರಮದಲ್ಲಿ ಸೇರಿರುವ ಎಲ್ಲಾ ನರೇಗಾ ಕೂಲಿಕಾರರು ನಿಮ್ಮ ಕುಟುಂಬದ 18 ವರ್ಷ ಮೇಲ್ಪಟ್ಟ ಸದಸ್ಯರೊಂದಿಗೆ ಮತ ಚಲಾಯಿಸುವ ಮೂಲಕ ದೇಶಕ್ಕೆ ಸುಭದ್ರ ಆಡಳಿತ ಒದಗಿಸಲು ಕೈ ಜೋಡಿಸೋಣ ಎಂದು ಸಿಇಒ ಅವರುಹೇಳಿದರು.

ತಾಲೂಕ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಾದ ದುಂಡಪ್ಪ ತುರಾದಿ ಅವರು ಮಾತನಾಡಿ, ಮತ ಚಲಾವಣೆ ತುಂಬಾ ಜವಾಬ್ದಾರಿಯುತವಾದ ಕಾರ್ಯ. ಆ ಮೂಲಕ ನಾವುಗಳು ಯಾವುದೇ ಆಸೆ, ಅಮೀಷಗಳಿಗೆ ಬಲಿಯಾಗದೇ ನಿರ್ಭಯವಾಗಿ ಮತ ಚಲಾಯಿಸಬೇಕೆಂದು ಕರೆನೀಡಿದರು.

ನಂತರ ಮತದಾರರ ಪ್ರತಿಜ್ಞಾ ವಿಧಿಯನ್ನು ಜಿಲ್ಲಾ ಪಂಚಾಯತಿ ಸಿಇಒ ಬೋಧಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಮಹಿಳಾ ಮತದಾರರಾದ ಹಂಪಮ್ಮ ಉಪ್ಪಾರ ಇವರನ್ನು ವೇದಿಕೆಗೆ ಆಹ್ವಾನಿಸಿದ ಸಿಇಒ ಕಾರ್ಯವೈಖರಿಗೆ ನರೇಗಾ ಕೂಲಿಕಾರರುಖುಷಿಪಟ್ಟರು.

ಸ್ವೀಪ್ ಕಾರ್ಯಕ್ರಮದಲ್ಲಿ ನರೇಗಾ ಸಹಾಯಕ ನಿರ್ದೇಶಕ ಯಂಕಪ್ಪ, ಹಿರಿಯ ಮಹಿಳಾ ಮತದಾರ ಹಂಪಮ್ಮ ಉಪ್ಪಾರ, ತಾಲೂಕಸ್ವೀಪ್‌ಸಮಿತಿನೋಡಲ್ ಅಧಿಕಾರಿ ಹನಮಂತಪ್ಪ, ತಾಲೂಕ ಯೋಜನಾಧಿಕಾರಿ ರಾಜೇಸಾಬ ನದಾಫ್, ತಾಲೂಕ ಸ್ವೀಪ್ ಸಮಿತಿ ಸದಸ್ಯರಾದ ಬಸವರಾಜ ಬಳಿಗಾರ, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ಪಂಚಾಯತ ಅಭಿವೃದ್ದಿ ಅಧಿಕಾರಿಗಳಾದ ರಾವ್‌ಸಾಹೇಬ ಬಿರಾದಾರ, ಗುರುದೇವಮ್ಮ, ರುದ್ರಯ್ಯ ಹಿರೇಮಠ, ತಾಂತ್ರಿಕ ಸಂಯೋಜಕ ಯಮನೂರಪ್ಪ, ತಾಂತ್ರಿಕ ಸಹಾಯಕರಾದ ರಮೇಶ್ ಕುಮಾರ, ಶಿವಪ್ರಸಾದ, ಗುರುರಾಜ,ಕಾಯಕಬಂಧುಗಳು, 1525 ನರೇಗಾ ಕೂಲಿಕಾರರು ಭಾಗವಹಿಸಿದ್ದರು.

# ಶ್ರೀ ಜಗದ್ಗುರು ರೇಣುಕ ಧರ್ಮ ನಿವಾಸದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಶ್ರೀ ಜಗದ್ಗುರು ರೇಣುಕಾಚಾರ್ಯ ರಥೋತ್ಸವ

**ಹುಬ್ಬಳ್ಳಿ:** ತಾಲೂಕಿನ ತಿರುಮಲಕೊಪ್ಪ ಗ್ರಾಮದ (ತಡಸ್ ಕ್ರಾಸ್) ಶ್ರೀ ಜಗದ್ಗುರು ರೇಣುಕ ಧರ್ಮ ನಿವಾಸದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಶ್ರೀ ಜಗದ್ಗುರು ರೇಣುಕಾಚಾರ್ಯ ರಥೋತ್ಸವ ಮತ್ತು ಜನಜಾಗೃತಿ ಧರ್ಮ ಸಮ್ಮೇಳನ ಎಪ್ರೀಲ್ 9ರ ಸಂಜೆ 6.30ಕ್ಕೆ ಜರುಗುವುದು. ಅ.ಭಾ.ವೀರಶೈವ ಶಿವಾಚಾರ್ಯ ಸಂಸ್ಥೆಯ ಅಧ್ಯಕ್ಷರಾದ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸುವರು. ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯರು, ಸೂಡಿ ಜುಕ್ತಿ ಹಿರೇಮಠದ ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯರು, ಮಳಲಿ ಸಂಸ್ಥಾನ ಮಠದ ಡಾ. ಗುರುನಾಗಭೂಷಣ ಶಿವಾಚಾರ್ಯರು, ಬಂಕಾಪುರದ ರೇವಣಸಿದ್ಧ ಶಿವಾಚಾರ್ಯರು, ಶ್ರೀ ಜಗದ್ಗುರು ರೇಣುಕ ಧರ್ಮ ನಿವಾಸದ ದಾನಯ್ಯ ದೇವರು ಪಾಲ್ಗೊಂಡು ಉಪದೇಶಾಮೃತ ನೀಡುವರು. ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಚಿವ ಸಂತೋಷ ಲಾಡ್, ಶಾಸಕರಾಧ ಎಂ.ಆರ್.ಪಾಟೀಲ, ಮಾಜಿ ಸಚಿವ ಪಿ.ಸಿ.ಸಿದ್ಧನಗೌಡ್ರ, ಮಾಜಿ ಸಂಸದ ಎಂ.ಸಿ.ಕುನ್ನೂರು, ಮಾಜಿ ಶಾಸಕರಾದ ಕುಸುಮಾವತಿ ಶಿವಳ್ಳಿ, ಎಸ್.ಐ.ಚಿಕ್ಕನಗೌಡ್ರ, ಎಂ.ಎಸ್.ಅಕ್ಕಿ ಸೇರಿದಂತೆ ಹಲವಾರು ಗಣ್ಯ ಮಾನ್ಯರು ಆಗಮಿಸುವರು.



ಸಮಾರಂಭಕ್ಕೂ ಮುನ್ನ ಶ್ರೀ ಜಗದ್ಗುರು ರೇಣುಕಾಚಾರ್ಯ ರಥೋತ್ಸವ ಜರುಗುವುದು. ಪ್ರಾತ:ಕಾಲ ಜಂಗಮ ವಟುಗಳಿಗೆ ಶಿವದೀಕ್ಷೆ ಅಯ್ಯಾಚಾರ ನಡೆಯುವುದು. ಶಿವದೀಕ್ಷಾ ಅಪೇಕ್ಷಿತರು ಹೆಸರನ್ನು ಮೊಬೈಲ ನಂ. 9980681109, 9945693405 ಹಾಗೂ 8904459341 ಮುಂಚಿತವಾಗಿ ಸಂಪರ್ಕಿಸಿ ನೊಂದಾಯಿಸಬೇಕು.

ಎಪ್ರೀಲ್ 8ರ ಸಂಜೆ ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ದಾನಯ್ಯದೇವರು ನಡೆಸಿಕೊಂಡು ಬಂದ ಲಿಂ. ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರ ಪುರಾಣ ಪ್ರವಚನ ಮಂಗ ಲ ಸಮಾರಂಭ ನಡೆಯಲಿದ್ದು ಮುಕ್ತಿಮಂದಿರದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು, ಸುಳ್ಳದ ಶಿವಸಿದ್ಧರಾಮೇಶ್ವರ ಶಿವಾಚಾರ್ಯರು ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ವೀರಭದ್ರಯ್ಯ ಚಿಕ್ಕಮಠ, ನಿಂಗಪ್ಪ ಹೊರಓಣಿ, ಶಿದ್ದಲಿಂಗಯ್ಯ ಪೂಜಾರ, ಗಂಗಯ್ಯ ಲೇಸಯ್ಯನವರಮಠ, ಡಾ॥ನಿಂಗರಾಜ ಲಿಂಬಿಕಾಯಿ, ಶಶಿಧರ ಉಳ್ಳಾಗಡ್ಡಿಮಠ ಸೇರಿದಂತೆ ಅನೇಕ ಗಣ್ಯರು ಆಗಮಿಸುವರು.



ಪ್ರಾತ:ಕಾಲ ಲಿಂ.ಶ್ರೀಮದ್ ರಂಭಾಪುರಿ ವೀರಗಂಗಾಧರ ಜಗದ್ಗುರುಗಳ ಮಂಗಲ ಮೂರ್ತಿಗೆ ರುದ್ರಾಭಿಷೇಕ ನಡೆಯುವುದು.

ದಿನಾಂಕ 10-4-2024ರಂದು ಸಂಜೆ 4.30ಕ್ಕೆ ಪಾರ್ವತಿ ರಥೋತ್ಸವ ಹಾಗೂ ಕಡುಬಿನ ಕಾಳಗ ಜರುಗುವುದು. ಆಗಮಿಸಿದ ಸಕಲ ಭಕ್ತಾದಿಗಳಿಗೆ ಪ್ರಸಾದ ಸೇವೆಯನ್ನು ತಿರುಮಲಕೊಪ್ಪದ ಶಂಕರಗೌಡ ಪ.ಪಾಟೀಲ, ಬುಡರಶಿಂಗಿಯ ಈಶ್ವರಯ್ಯ ಚ.ಹಿರೇಮಠ, ಕುಂದಗೋಳದ ಮುತ್ತಣ್ಣ ತಡಸೂರ, ಕುಂದಗೋಳದ ಗಂಗಾಧರಯ್ಯ ನಾವಳ್ಳಿಮಠ, ಅಗಡಿ ಗ್ರಾಮ ಪಂಚಾಯತಿ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರು ವಹಿಸಿಕೊಂಡಿದ್ದಾರೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

# ಸೋಶಿಯಲ್ ಮೀಡಿಯಾ: ಸುಳ್ಳು ಸುದ್ದಿ, ಮಾದರಿ ನೀತಿ ಸಂಹಿತೆ ಉಲ್ಲಂಘನೆ ವರದಿಗಳ ನಿಗಾವಹಿಸಲು ಪ್ರತ್ಯೇಕ ಉಸ್ತುವಾರಿ ಕೋಶ ರಚಿಸಲಾಗಿದೆ: ಜಿಲ್ಲಾ ಚುನಾವಣಾಧಿಕಾರಿ ದಿವ್ಯ ಪ್ರಭು

**ಧಾರವಾಡ :** ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಗಳು ಮತ್ತು ವಿಷಯಗಳು ಅತ್ಯಧಿಕವಾಗಿದ್ದು, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಇವುಗಳ ಮೂಲಕ ಕಾನೂನುಬಾಹಿರ ಮತ್ತು ಸುಳ್ಳು ಸುದ್ದಿಗಳು ಹರಡುವುದನ್ನು ನಿಯಂತ್ರಿಸಲು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಸಾಮಾಜಿಕ ಜಾಲತಾಣಗಳ ಉಸ್ತುವಾರಿ ಕೋಶವನ್ನು ಧಾರವಾಡ ಜಿಲ್ಲಾ ಚುನಾವಣಾ ನಿಯಂತ್ರಣ ಕೇಂದ್ರದಲ್ಲಿ ತೆರೆಯಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಅಂತರ್ಜಾಲದಲ್ಲಿ ಪ್ರಕಟಗೊಳ್ಳುವ ಸುದ್ದಿಗಳು, ಪ್ರಸಕ್ತ ವಿದ್ಯಮಾನಗಳು ಮತ್ತು ಓಟಿಟಿ ಪ್ಲಾಟ್‌ಫಾರಂನಲ್ಲಿ (ಉತ್ತೇಕ್ಷಿತ) ಸುದ್ದಿಗಳು ಹರಡುವುದನ್ನು ಪರಿಶೀಲಿಸಿ, ಉಲ್ಲಂಘನೆ ಆಗುವ ವರದಿಗಳನ್ನು ನಿಯಂತ್ರಿಸಲು ವಿಷಯ ಪರಿಣಿತ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಸೋಷಿಯಲ್ ಮೀಡಿಯಾ ಘಟಕವನ್ನು ರಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಸುಳ್ಳು ಸುದ್ದಿಗಳನ್ನು ಹರಡುವುದು, ಹಾಗೂ ಚುನಾವಣೆ ನೀತಿ ಸಂಹಿತೆ ಉಲಂಘನೆ ಮಾಡಿ ಸಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವವರ ಮೇಲೆ ನಿಗಾ ಇಡಲು



ಸಮಾಜಿಕ ಜಾಲತಾಣ ಕೋಶವನ್ನು ಜಿಲ್ಲೆಯಲ್ಲಿ ರಚನೆ ಮಾಡಲಾಗಿದ್ದು, ಅದು ದಿನದ 24 ಗಂಟೆ ಕಾರ್ಯ ನಿರ್ವಹಿಸುತ್ತಿದೆ. ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಪತ್ರಿಕೋದ್ಯಮ ವಿಭಾಗದ ಸಹ ಪ್ರಾಧ್ಯಾಪಕರು ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯ ತಾಂತ್ರಿಕ ಸಮಾಲೋಚಕರು, ನುರಿತ ಶಿಕ್ಷಕರು ಸೇರಿದಂತೆ ಸುಮಾರು 20 ಜನರ ತಂಡವು ಈ ಕಾರ್ಯನಿರ್ವಹಿಸುತ್ತಿದ್ದು, ಸೋಶಿಯಲ್ ಮೀಡಿಯಾ ಪ್ಲಾಟ್‌ಪಾರ್ಮ್ ಮೇಲೆ ನಿರಂತರ ನಿಗಾವಹಿಸಿದೆ ಎಂದು ಅವರು ತಿಳಿಸಿದ್ದಾರೆ.

ಈ ಕೋಶವು ಸಾಮಾಜಿಕ ಜಾಲತಾಣಗಳಾದ ಪೇಸ್‌ಬುಕ್, ವಾಟ್ಸಪ್, ಟ್ವಿಟರ್, ಟೆಲಿಗ್ರಾಂ, ಯೂಟ್ಯೂಬ್, ವೆಬ್ ಚಾನೆಲ್‌ಗಳಲ್ಲಿ ಪ್ರಸಾರವಾಗುವ ಎಲ್ಲಾ ಬಗೆಯ ಸುದ್ದಿ ಮತ್ತು ಆಡಿಯೋ, ವಿಡಿಯೋ ಸಂದೇಶಗಳ ಮೇಲೆ ಹದ್ದಿನ ಕಣ್ಣು ಇಡುವ ಮೂಲಕ ಸುಳ್ಳು ಸುದ್ದಿಗಳ ನಿಯಂತ್ರಣ ಮಾಡಲಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳು ಮತ್ತು ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗುವ ಪ್ರಕರಣಗಳು ಕಂಡು ಬಂದಲ್ಲಿ, ಸಂಬಂಧಪಟ್ಟ ಸುದ್ದಿ ಅಥವಾ ವಿಡಿಯೋ ಪ್ರಸಾರದ ಮೂಲವನ್ನು ಪತ್ತೆ ಹಚ್ಚಿ, ಸಂಬಂಧಿಸಿದ ಲಿಂಕ್, ಸ್ಕ್ರಿನ್‌ಶಾಟ್‌ಗಳ ದಾಖಲೆ ಸಹಿತ, ಸಾಮಾಜಿಕ ಜಾಲತಾಣದಲ್ಲಿ ಪ್ರಚಾರಪಡಿಸುವವರ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ ಹಾಗೂ ಪೊಲೀಸ್ ಕಾಯ್ದೆ ಮತ್ತು ಮಾದರಿ ನೀತಿ ಸಂಹಿತೆ ಉಲ್ಲಂಘನೆಯಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಜಿಲ್ಲಾ ಚುನಾವಣಾಧಿಕಾರಿಗಳಾಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರ ಅಧ್ಯಕ್ಷತೆಯಲ್ಲಿ ಇಂದು (ಏ.03) ಮಧ್ಯಾಹ್ನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಾಮಪತ್ರ ಸಲ್ಲಿಕೆ ಅವಧಿ ಹಾಗೂ ಚುನಾವಣಾಧಿಕಾರಿಗಳ ಕಚೇರಿ ಸುತ್ತಲೂ ಪೊಲೀಸ್ ಬಂದೋಬಸ್ತ ಮಾಡುವ ಕುರಿತು ಮಹಾನಗರ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ ಅವರು ಸಭೆ ಜರುಗಿಸಿದರು. ಸಭೆಯಲ್ಲಿ ಉಪ ಪೊಲೀಸ್ ಆಯುಕ್ತರು, ಚುನಾವಣಾ ನೋಡಲ್ ಅಧಿಕಾರಿಗಳು, ಚುನಾವಣಾ ಸಿಬ್ಬಂದಿಗಳು ಭಾಗವಹಿಸಿದ್ದರು.

# ಪತ್ರ ಬರೆಯುವ ಮೂಲಕ ಮತದಾನ ಮಾಡುವಂತೆ ಮನವಿ

**ಧಾರವಾಡ :** ಪ್ರೀತಿಯ ತಂದೆಯವರಿಗೆ, ತಾಯಿಯವರಿಗೆ, ಅಣ್ಣಂದಿರಿಗೆ, ಅಕ್ಕಂದಿರಿಗೆ ನಮ್ಮ ಮುಂದಿನ ಭವಿಷ್ಯದ ಹಿತದೃಷ್ಟಿಯಿಂದ ಬರುವ ಮೇ. 7 ರಂದು ಲೋಕಸಭಾ ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡುವಂತೆ ವಸತಿ ಶಾಲೆಗಳ ವಿದ್ಯಾರ್ಥಿಗಳು ಪಾಲಕರಿಗೆ ಪತ್ರ ಬರೆಯುವ ಮೂಲಕ ಮತದಾನ ಜಾಗೃತಿ ಮೂಡಿಸಿದರು.

ಧಾರವಾಡದ ಪೊ?ಸ್ಟ ಮ್ಯಾಟ್ರಿಕ್ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳು ತಮ್ಮ ಪಾಲಕರಿಗೆ ಮತದಾನದಿಂದ ದೂರ ಉಳಿಯದೇ ನಿಮ್ಮ ಮತದಾನದ ಹಕ್ಕನ್ನು ಚಲಾಯಿಸಿ. ಸದೃಢ ಭಾರತ ನಿರ್ಮಾಣಕ್ಕೆ ಕೈ ಜೋಡಿಸಿರಿ ಎಂದು ಪತ್ರಗಳ ಮೂಲಕ ಮನವಿ ಮಾಡಿದ್ದಾರೆ.

ಮೂರ್ನಾಲ್ಕು ದಶಕಗಳ ಹಿಂದೆ ಜನರಿಗೆ ಪತ್ರಗಳಿಂದ ಬೇರೆ ಬೇರೆ ಸ್ಥಳಗಳಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ಮಾಹಿತಿ ದೊರೆಯುತ್ತಿತ್ತು. ಇಂದು ಮೊಬೈಲ್, ಅಂತರ್ಜಾಲ, ಮಾಹಿತಿ



ತಂತ್ರಜ್ಞಾನ ಬೆಳವಣಿಗೆಯಿಂದ ಕ್ಷಣಾರ್ಧದಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಮಕ್ಕಳು ತಮ್ಮ ಪಾಲಕರಿಗೆ ಪತ್ರ ಬರೆಯುವುದರ ಮೂಲಕ ಕಡ್ಡಾಯವಾಗಿ ಮತದಾನ ಮಾಡುವಂತೆ ಪ್ರೇರಣೆ ನೀಡಿದ್ದಾರೆ.

ಮಕ್ಕಳ ಪತ್ರ ಬರೆದಿರುವುದನ್ನು ಓದಿದಾಗ ಪಾಲಕರಿಗೆ ಖುಷಿ ನೀಡಲಿದೆ. ಅಲ್ಲದೇ ತಪ್ಪದೇ ಮತ ಚಲಾಯಿಸುವುದರಿಂದ, ಮತದಾನ ಪ್ರಮಾಣ ಹೆಚ್ಚಳವಾಗಲಿದೆಯೆಂದು ಸ್ವೀಪ್ ನೋಡಲ್ ಅಧಿಕಾರಿಗಳು ಆಗಿರುವ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ.ಟಿ.ಕೆ ಅವರು ಮಾತನಾಡಿದರು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ದೀಪಕ ಮಡಿವಾಳರ, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಗೋಪಾಲ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಜರಿದ್ದರು.

## ಲೋಕಸಭೆ ಸಾರ್ವತ್ರಿಕ ಚುನಾವಣೆ-2024

# ರಾಜಕೀಯ ಪಕ್ಷ ಪ್ರತಿನಿಧಿಗಳ ಸಮ್ಮುಖದಲ್ಲಿ ಇವಿಎಂ, ವಿ.ವಿ. ಪ್ಯಾಟ್ಸ್‌ಗಳ 1ನೇ ಹಂತದ ರ್‍ಯಾಂಡಮೈಜೇಷನ್

**ಧಾರವಾಡ :** ಧಾರವಾಡ ಲೋಕಸಭೆ ಸಾರ್ವತ್ರಿಕ ಚುನಾವಣೆ 2024 ಕ್ಕೆ ಸಂಬಂಧಿಸಿದಂತೆ ಇ.ವಿ.ಎಂ. ಮತ್ತು ವಿ.ವಿ.ಪ್ಯಾಟ್ಸ್‌ಗಳ 1 ನೇಯ ಹಂತದ ರ್‍ಯಾಂಡಮೈಜೇಷನ್ ಕಾರ್ಯವನ್ನು ತಂತ್ರಾಂಶದ ಮೂಲಕ ರಾಷ್ಟ್ರೀಯ ರಾಜಕೀಯ ಪಕ್ಷಗಳ ಹಾಗೂ ಇತರ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಇಂದು (ಮಾ.21) ಸಂಜೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳಾದ ದಿವ್ಯ ಪ್ರಭು ಅವರು ಜರುಗಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಜಿಲ್ಲಾ ಚುನಾವಣಾಧಿಕಾರಿಗಳು



ಇವಿಎಂ, ವಿ.ವಿ.ಪ್ಯಾಟ್ಸ್‌ಗಳ ರ್‍ಯಾಂಡಮೈಜೇಷನ್ ಕುರಿತು, ಮತದಾರ ಪಟ್ಟಿ, ಮತಗಟ್ಟೆಗಳ ಕುರಿತು, ಪ್ರಚಾರ ಸಂದರ್ಭದಲ್ಲಿ ಅನುಸರಿಸುವ ನಿಯಮಗಳ ಕುರಿತು ಅವರು ವಿವರಿಸಿದರು.

ಸಭೆಯಲ್ಲಿ ಭಾರತೀಯ ಜನತಾ ಪಕ್ಷದ ಆರ್.ಎಂ.ಕಲ್ಯಾಣಶೆಟ್ಟಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರಕಾಶ ಹಳಿಯಾಳ, ಜಾತ್ಯಾತೀತ ಜನತಾದಳ ಪಕ್ಷದ ಗುರುರಾಜ ಹುಣಸಿಮರದ ಮತ್ತು ದೇವರಾಜ ಕಂಬಳಿ, ಆಮ್ ಆದ್ಮಿ ಪಕ್ಷದ ಅವಿನಾಶ, ಬಹುಜನ ಸಮಾಜವಾದಿ ಪಕ್ಷ ಶೋಭಾ ಬಳ್ಳಾರಿ ಸೇರಿದಂತೆ ವಿವಿಧ ರಾಜಕೀಯ ಪಕ್ಷ ಪ್ರತಿನಿಧಿಗಳು, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ, ಧಾರವಾಡ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯ ಎಲ್ಲ ಸಹಾಯಕ ಚುನಾವಣಾಧಿಕಾರಿಗಳು, ವಿವಿಧ ನೋಡಲ್ ಅಧಿಕಾರಿಗಳು ಭಾಗವಹಿಸಿದ್ದರು.

# ಸಂಸತ್‌ನಲ್ಲಿ ಮೃಣಾಲ್ ಬೆಳಗಾವಿ ಧ್ವನಿಯಾಗಿ ಕೆಲಸ ಮಾಡಲಿದ್ದಾನೆ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

**ಬೆಳಗಾವಿ:** ಜನರಕಷ್ಟಸುಖಗಳಬಗ್ಗೆಅರಿವಿರುವ ಮೃಣಾಲ್ ಹೆಬ್ಬಾಳ್ಕರ್, ಕ್ಷೇತ್ರದ ಅಭಿವೃದ್ಧಿಗೆ ತನ್ನದೇ ಆದ ಕನಸು ಕಟ್ಟಿಕೊಂಡಿದ್ದಾನೆ. ಬೆಳಗಾವಿ ಧ್ವನಿಯಾಗಿ ಸಂಸತ್‌ನಲ್ಲಿ ಕೆಲಸ ಮಾಡಲಿದ್ದಾನೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಶನಿವಾರ ಸಂಜೆ ಗೆಜಪತಿ, ಬಡಸ್.ಕೆ.ಎಚ್, ಕುಕಡೊಳ್ಳಿ, ಬೆಂಡಿಗೇರಿ, ನಾಗೇರಹಾಳ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಪರ ಮತಯಾಚಿಸಿದ ಸಚಿವರು, ಆಶೀರ್ವಾದ ಮಾಡಿ ಅವನನ್ನು ಸಂಸತ್‌ಗೆ ಕಳುಹಿಸಿಕೊಡಿ ಎಂದು ವಿನಂತಿಸಿಕೊಂಡರು.

ಉತ್ತಮ ಸಂಸ್ಕೃತಿ ಕಲಿತಿದ್ದಾನೆ

ನಾನು ಅಧಿಕಾರ ಇರಲಿ, ಬಿಡಲಿ ಜನರೊಂದಿಗೆ ಬೆರತು, ಉತ್ತಮ ರೀತಿ ನಡೆದುಕೊಳ್ಳುತ್ತಿದ್ದೇನೆ. ನನ್ನ ಮಗನಿಗೂ ಉತ್ತಮ ನಡತೆ, ಸಂಸ್ಕೃತಿಯನ್ನು ಕಲಿಸಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅವರ ಮಾರ್ಗದರ್ಶನದಂತೆ ಮೃಣಾಲ್ ಹೆಬ್ಬಾಳ್ಕರ್ ಅವರನ್ನು ಬೆಳಗಾವಿಯಿಂದ, ಪ್ರಿಯಾಂಕಾ ಜಾರಕಿಹೊಳಿ ಅವರನ್ನು ಚಿಕ್ಕೋಡಿಯಿಂದ ಕಣಕ್ಕಿಳಿಸಲಾಗಿದೆ. ಇಬ್ಬರು ಯುವ ಅಭ್ಯರ್ಥಿಗಳಿಗೆ ಜನರು ಆಶೀರ್ವಾದ ಮಾಡಬೇಕು ಎಂದು ಹೇಳಿದರು.

ಬದ್ಧತೆಗೆ ಮತ್ತೊಂದು ಹೆಸರೇ ಕಾಂಗ್ರೆಸ್

ಕಾಂಗ್ರೆಸ್ ಪಕ್ಷ ಎಂದರೆ ಬದ್ಧತೆ, ಬದ್ಧತೆ ಎಂದರೆ ಕಾಂಗ್ರೆಸ್. ಬಡ ಜನರು ಭರವಸೆ ಹೊಂದಿರುವ ಪಕ್ಷ ನಮ್ಮದು. ಗೃಹಲಕ್ಷ್ಮೀ ಯೋಜನೆಯಿಂದ ಪ್ರತಿ ತಿಂಗಳು ಎರಡು ಸಾವಿರ, ಉಚಿತ ಬಸ್ ಪ್ರಯಾಣ, ಉಚಿತ ವಿದ್ಯುತ್ ಹೀಗೆ ತಿಂಗಳಿಗೆ ಒಂದು ಕುಟುಂಬಕ್ಕೆ ಸರ್ಕಾರದಿಂದ 5 -6 ಸಾವಿರ ರೂ ಹಣದ ರೂಪದಲ್ಲಿ ಬರುತ್ತಿದೆ. ಅಂದರೆ ಒಂದು ವರ್ಷಕ್ಕೆ 60 ಸಾವಿರ ರೂಪಾಯಿ ಸಿಗುತ್ತಿದೆ ಎಂದರು. ಒಬ್ಬ ರೈತ ಬಿಸಿಲು, ಮಳೆಯಲ್ಲಿ ಕೆಲಸಮಾಡಿ 20 ಟನ್ ಕಬ್ಬು ಬೆಳೆದರೂ ನಿರೀಕ್ಷಿತ ಆದಾಯ ನೋಡಲು ಆಗುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಚುನಾವಣಾ ಪೂರ್ವದಲ್ಲಿ ಕೊಟ್ಟ ಮಾತನ್ನು ಉಳಿಸಿಕೊಂಡಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಬಡ ಜನರ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಕೊಟ್ಟ ಮಾತನ್ನು ಉಳಿಸಿಕೊಂಡ ರಾಜಕಾರಣಿಗಳು ಎಂದರೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್. ಕಳೆದ 10 ತಿಂಗಳಿಂದ ಕಾಂಗ್ರೆಸ್ ಸರ್ಕಾರ ಜನ ಮೆಚ್ಚುವಂಥ ಕೆಲಸಗಳನ್ನು ಮಾಡಿಕೊಂಡು ಬಂದಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಈ ಭಾಗದ ಜನರು ನನಗೆ ಆಶೀರ್ವಾದ ಮಾಡಿದ್ದಾರೆ. ನನಗೆ ಬೆಂಬಲ ನೀಡಿದ ರೀತಿಯಲ್ಲಿಯೇ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್‌ಗೂ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

15 ಲಕ್ಷ ಬಂದಿಲ್ಲ ಎಂದು ಬಿಜೆಪಿಗರನ್ನು ಪ್ರಶ್ನಿಸಿ

ಕಳೆದ 10 ವರ್ಷಗಳ ಹಿಂದೆ ಪ್ರತಿ ಅಕೌಂಟ್‌ಗೆ 15 ಲಕ್ಷ ರೂಪಾಯಿ ಹಾಕುತ್ತೇನೆ ಎಂದಿದ್ದ ಮೋದಿ ಇದುವರೆಗೂ ಒಂದು ಪೈಸೆ ಕೊಟ್ಟಿಲ್ಲ. ಈ ಬಗ್ಗೆ ಚುನಾವಣಾ ಪ್ರಚಾರಕ್ಕೆ ಬರುವ ಬಿಜೆಪಿಯವರ ಹತ್ತಿರ ಪ್ರಶ್ನಿಸಿ ಎಂದು ಹೇಳಿದರು.

ಮನೆ ಮಗ ಬೇಕೋ, ಹೊರಗಿನ ವ್ಯಕ್ತಿ ಬೇಕೋ?

ಹುಬ್ಬಳ್ಳಿ-ಧಾರವಾಡ ಜನರಿಂದ ತಿರಸ್ಕರಿಸಲ್ಪಟ್ಟು, ಹಾವೇರಿಯಿಂದ ಟಿಕೆಟ್ ಸಿಗದೆ ಇದೀಗ ಬೆಳಗಾವಿಗೆ ವಲಸೆ ಬಂದಿರುವ ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಬೇಕೋ, ನಿಮ್ಮ ಮನೆ ಮಗ ಮೃಣಾಲ್ ಹೆಬ್ಬಾಳ್ಕರ್ ಬೇಕೋ ಎಂದು ನೀವೇ ನಿರ್ಧರಿಸಿ ಎಂದು ಸಚಿವರು ಹೇಳಿದರು.

ಬಿಜೆಪಿ ಅಭ್ಯರ್ಥಿ ಗೆದ್ದರೆ ಅವರನ್ನು ಹುಡುಕಿಕೊಂಡು ಹುಬ್ಬಳ್ಳಿಗೆ ಹೋಗಬೇಕು. ಮೃಣಾಲ್ ಗೆದ್ದರೆ ನಿಮ್ಮ ಮನೆ ಮುಂದಕ್ಕೆ ಬರುತ್ತಾನೆ. ಕಾಂಗ್ರೆಸ್ -ಬಿಜೆಪಿ ಅಭ್ಯರ್ಥಿಗಿರುವುದು ಇಷ್ಟೇ ವ್ಯತ್ಯಾಸ ಎಂದು ಹೇಳಿದರು.

# ಪರಿಶುದ್ಧವಾದ ಬಾಳಿಗೆ ರೇಣುಕಾಚಾರ್ಯರ ಸಂದೇಶಗಳು ದಾರಿದೀಪ: ಶ್ರೀ ರಂಭಾಪುರಿ ಜಗದ್ಗುರುಗಳು





**ಅಜ್ಜಂಪುರ :** ಸುಖದ ಮೂಲ ಧರ್ಮಾಚರಣೆಯಲ್ಲಿದೆ. ಬಾಳಿನ ಭಾಗ್ಯೋದಯಕ್ಕೆ ಪೂರ್ವಜರ ಚಿಂತನಗಳು ಪೂರಕವಾಗಿವೆ. ಸಮರ ಜೀವನವನ್ನು ಅಮರ ಜೀವನದೆಡೆಗೆ ಕೊಂಡೊಯ್ಯಲು ಮತ್ತು ಪರಿಶುದ್ಧವಾದ ಬಾಳಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ತತ್ವ ಸಂದೇಶಗಳು ದಾರಿದೀಪವಾಗಿವೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ತಾಲೂಕಿನ ಗೌರಾಪುರ ಶ್ರೀ ಚನ್ನಬಸವೇಶ್ವರ ಸಮುದಾಯ ಭವನದಲ್ಲಿ ಜರುಗಿದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು. ಭೌತಿಕ ಜೀವನದಲ್ಲಿ ಬೆಂದು ಬಳಲಿ ಬಂದವರಿಗೆ ಆಧ್ಯಾತ್ಮ ಜ್ಞಾನದ ಸಂಪತ್ತು ಆತ್ಮಬಲ ಉಂಟು ಮಾಡುತ್ತದೆ.

ಜಾತಿ ಜನಾಂಗಗಳ ಗಡಿ ಮೀರಿ ಮಾನವೀಯ ಉದಾತ್ತ ಮೌಲ್ಯಗಳನ್ನು ಸದಾ ಬೆಳೆಸುವಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೊಡುಗೆ ಅಮೂಲ್ಯವಾಗಿದೆ. ಸಾಮರಸ್ಯಸೌಹಾರ್ದತೆಯ ಬದುಕಿನ ಬೆಸುಗೆಗೆ ರೇಣುಕಾಚಾರ್ಯರು ಬೋಧಿಸಿದ ಚಿಂತನೆಗಳ ಪರಿಪಾಲನೆಯ ಅವಶ್ಯಕತೆ ಬಹಳಷ್ಟಿದೆ. ಸಾತ್ವಿಕ ತಾತ್ವಿಕ ತಳಹದಿಯ ಮೇಲೆ ಮಾನವ ಜೀವನ ರೂಪಿತಗೊಳ್ಳಲು ಅವರು ಬೋಧಿಸಿದ ಶಿವಾದ್ವೈತ ಜ್ಞಾನ ಸಂಪತ್ತು ಉಜ್ವಲ ಬಾಳಿನ ಶ್ರೇಯಸ್ಸಿಗೆ ಕಾರಣವಾಗಿವೆ. ಸಂಸ್ಕಾರ ಸಂಸ್ಕೃತಿಗಳ ಮೂಲಕ ಜನಮನವನ್ನು ತಿದ್ದಿ ತೀಡಿ ಸನ್ಮಾರ್ಗಕ್ಕೆ ಕರೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ. ಗೌರಾಪುರ ಗ್ರಾಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಅದ್ದೂರಿಯಾಗಿ ಜರುಗುತ್ತಿರುವುದು ತಮ್ಮೆಲ್ಲರಲ್ಲಿರುವ ಧರ್ಮನಿಷ್ಠೆಗೆ ಸಾಕ್ಷಿಯಾಗಿದೆ ಎಂದು ಹರುಷ ವ್ಯಕ್ತಪಡಿಸಿದರು.

ಸಮಾರಂಭವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಸಕಲರಿಗೂ ಅಭ್ಯುದಯ ಬಯಸಿದ ಮತ್ತು ಮೌಲ್ಯಾಧಾರಿತ ಬದುಕಿನ ಸೂತ್ರಗಳನ್ನು ಬೋಧಿಸಿದ ಯುಗಪುರುಷರು ರೇಣುಕಾಚಾರ್ಯರು. ಸಂಸ್ಕೃತಿಯ ಪುನಶ್ಚೇತನದೊಂದಿಗೆ ಸಾಮಾಜಿಕ ಸತ್ಕ್ರಾಂತಿಗೆ ಸೆಲೆ ನೆಲೆಯಾದವರು ರೇಣುಕಾಚಾರ್ಯರು. ಅವರ ಆದರ್ಶ ಚಿಂತನಗಳನ್ನು ಮೈಗೂಡಿಸಿಕೊಂಡು ಬಾಳಬೇಕೆಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ತಾಲೂಕ ಜಂಗಮ ಸಮಾಜದ ಅಧ್ಯಕ್ಷರಾದ ಎಸ್.ವಿ.ಗಂಗಾಧರಯ್ಯ ಮಾತನಾಡಿ ಸರ್ವ ಜನಾಂಗದ ಉನ್ನತಿಗೆ ಧರ್ಮವೇ ಮೂಲವಾಗಿದೆ. ಪೂರ್ವದ ಋಷಿಮುನಿಗಳು ಮತ್ತು ಆಚಾರ್ಯರು ಅಮೂಲ್ಯವಾದ ಕೊಡುಗೆ ಕೊಟ್ಟಿದ್ದಾರೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ವಿಶ್ವ ಬಂಧುತ್ವದ ಚಿಂತನಗಳನ್ನು ಬೋಧಿಸುವುದರ ಮೂಲಕ ಭಕ್ತ ಸಮುದಾಯದ ಭಾವನೆಗಳನ್ನು ಪರಿಶುದ್ಧಗೊಳಿಸಿದ್ದಾರೆ. ಅಂಥಮಹಿಮಾನ್ವಿತರ ಸಿದ್ಧಿ ಸಾಧನೆಗಳು ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಪ್ರಸಾರಪಡಿಸುವ ಸದುದ್ದೇಶದ ಹಿನ್ನೆಲೆಯಲ್ಲಿ ಈ ವರುಷ ಗೌರಾಪುರದಲ್ಲಿ ಜರುಗುತ್ತಿರುವುದು ನಮ್ಮೆಲ್ಲರಿಗೂ ಸಂತೋಷವನ್ನು ತಂದಿದೆ ಎಂದರು. ಈ ಪವಿತ್ರ ಸಮಾರಂಭದಲ್ಲಿ ಹುಣಸಘಟ್ಟ ಗುರುಮೂರ್ತಿ ಶಿವಾಚಾರ್ಯರು, ತೆಂಡೇಕೆರೆ ಗಂಗಾಧರ ಶಿವಾಚಾರ್ಯರು, ಬಿಳಕಿ ರಾಚೋಟೇಶ್ವರ ಶಿವಾಚಾರ್ಯರು, ಬೀರೂರು ರುದ್ರಮುನಿ ಶಿವಾಚಾರ್ಯರು, ತಾವರೆಕೆರೆ ಡಾ. ಅಭಿನವ ಸಿದ್ಧಲಿಂಗ ಶಿವಾಚಾರ್ಯರು ಪಾಲ್ಗೊಂಡು ನುಡಿನಮನ ಸಲ್ಲಿಸಿದರು. ಮುಖ್ಯ ಅತಿಥಿಗಳಾಗಿ ಚಿಕ್ಕಮಗಳೂರಿನ ಬಿ.ಪಿ.ಶಿವಮೂರ್ತಿ, ಗೌರಾಪುರದ ಜಿ.ಹೆಚ್.ಜಯಮೂರ್ತಿ, ಶಿವನಿಯ ಎಸ್.ಎಸ್.ಶ್ರೀಕಂಠಪ್ಪ, ಚಿ.ಸ.ಪ್ರಭುಲಿಂಗ ಶಾಸ್ತ್ರಿ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಆಶೀರ್ವಾದ ಪಡೆದರು. ಜಿ.ಎಸ್.ಶೇಖರಯ್ಯ, ಜಿ.ಆರ್. ಓಂಕಾರಯ್ಯ, ಡಾ.ಜಿ.ಆರ್.ಶಿವಪ್ರಸಾದ್, ಡಿ.ರಾಜಣ್ಣ, ಜಿ.ಸಿ.ಲಿಂಗಮೂರ್ತಿ, ಜಿ.ಉಮಾಪತಿ ಮೊದಲಾದ ಗಣ್ಯರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭಹಾರೈಸಿದರು. ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಜರುಗಿತು. ನಿವೃತ್ತ ಶಿಕ್ಷಕ ಸೋಮಶೇಖರ ಸ್ವಾಗತಿಸಿದರು. ಶಿವಮೊಗ್ಗದ ಶಾಂತಾ ಆನಂದ ಅವರು ಭಕ್ತಿಗೀತೆ ಹಾಡಿದರು. ಗೌರಾಪುರದ ಶಿಕ್ಷಕಿ ಸೌಮ್ಯಮೋಹನ್‌ಕುಮಾರ ನಿರೂಪಿಸಿದರು.

ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು. ಸಹಸ್ರಾರು ಜನರು ಪಾಲ್ಗೊಂಡು ಜಗದ್ಗುರುಗಳ ಆಶೀರ್ವಾದ ಪಡೆದರು. ಸಮಾರಂಭದ ನಂತರ ಅನ್ನ ದಾಸೋಹ ಜರುಗಿತು.

# ಜೈನ ಮುನಿಗಳ ಆಶೀರ್ವಾದ ಪಡೆದ ಮೃಣಾಲ ಹೆಬ್ಬಾಳಕರ್

**ಬೆಳಗಾವಿ :** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ವಿಧಾನ ಪರಿಷತ್ ಸದಸ್ಯಚನ್ನರಾಜಹಟ್ಟಿಹೊಳಿ ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಮೃಣಾಲ ಹೆಬ್ಬಾಳಕರ್ ಗುರುವಾರ ಬೆಳಗಾವಿಯ ಪಾಂಗುಳ ಗಲ್ಲಿಯಲ್ಲಿರುವ ಚಂದ್ರ ಪ್ರಭು ಶ್ವೇತಾಂಬರ ಜೈನ ಬಸದಿಗೆ ತೆರಳಿ, ಪರಮ ಪೂಜ್ಯಕುಂದಕುಂದಸುರೇಶ್ವರಜೀಮಹಾರಾಜ ಸಾಹೇಬ್, ಪರಮ ಪೂಜ್ಯ ಆಚಾರ್ಯ ವಿಜ್ಞಾನಪ್ರಭಾ ಸುರೇಶ್ವರ ಜೀ ಮಹಾರಾಜ ಸಾಹೇಬ್ ಹಾಗೂ ಇವರ ಶಿಷ್ಯರಾದ ಪರಮ ಪೂಜ್ಯಮುನಿನಿರಮೋಹಪ್ರಭಾಅವರದರ್ಶನ ಪಡೆದು, ಈ ಎಲ್ಲ ಆಚಾರ್ಯರ ಆಶೀರ್ವಾದ ಹಾಗೂ ಮಾರ್ಗದರ್ಶನ ಪಡೆದರು.



# ಶಾಸಕ ಡಾ॥ ವಿಜಯಾನಂದ ಎಸ್. ಕಾಶಪ್ಪನವರ ಮನೆಗೆ ದಿಡೀರ್ ಭೇಟಿ ನೀಡಿದ ಸಚಿವ ಶಿವಾನಂದ ಪಾಟೀಲ



**ಇಳಕಲ್ :** ಬಾಗಲಕೋಟೆ ಲೋಕಸಭಾ ಚುನಾವಣೆಯ ನಿಮಿತ್ಯ ಕಾಶಪ್ಪನವರ ನಿವಾಸಕ್ಕೆ ಧಿಡೀರ ಭೇಟಿ ನೀಡಿ ಚುನಾವಣೆಯ ಪ್ರಚಾರದ ಕುರಿತು ಸುಧೀರ್ಘವಾಗಿ ಚರ್ಚಿಸಿದರು.

ಈ ಭಾರಿ ಬಾಗಲಕೋಟೆ ಲೋಕಸಭಾ ಮತಕ್ಷೇತ್ರದ ಕಾಂಗ್ರೆಸ ಅಭ್ಯರ್ಥಿಯಾದ ಸಂಯುಕ್ತಾ ಶಿವಾನಂದ ಪಾಟೀಲ ಅವರನ್ನು ಕಾಂಗ್ರೆಸ ಪಕ್ಷದ ಎಲ್ಲಾ ನಾಯಕರು ಒಗ್ಗಟ್ಟಾಗಿ ಪ್ರಚಾರ ಮಾಡುವುದರ ಮೂಲಕ ಆಯ್ಕೆ ಮಾಡಿ ಸಂಸತ್ತಿಗೆ ಕಳಿಸೋಣ ಎಂದು ಹುನಗುಂದ ಮತಕ್ಷೇತ್ರದ ಶಾಸಕ,ಲಿಂಗಾಯತ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಡಾ ॥ ವಿಜಯಾನಂದ ಎಸ್.ಕಾಶಪ್ಪನವರು ಹೇಳಿದರು.

ಪತ್ರಕರ್ತರು ಹೇಳಿದ ಪ್ರಶ್ನೆಗೆ ಸಚಿವ ಶಿವಾನಂದ ಪಾಟೀಲ ಅವರು ನಮ್ಮಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ, ಅಭಿಪ್ರಾಯ ಪಕ್ಷದಲ್ಲಿ ಇರುವುದು ಸಹಜ, ಆದರೆ ನಮ್ಮಲ್ಲಿ ಯಾವುದೇ ಮನಸ್ತಾಪ ಇಲ್ಲ, ಅದು ಮುಗಿದ ಅಧ್ಯಾಯ ನಾವೆಲ್ಲರೂ ಒಕ್ಕಟ್ಟಾಗಿದ್ದೇವೆ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

# ಚಿತ್ತರಗಿಯಲ್ಲಿ ಸ್ವ-ಸಹಾಯ ಸಂಘದ ಸದಸ್ಯರಿಗೆ ಮತದಾನ ಜಾಗೃತಿ



**ಬಾಗಲಕೋಟೆ :** ಹುನಗುಂದ ತಾಲೂಕಿನ ಚಿತ್ತರಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮತದಾನ ಜಾಗೃತಿ ಹಾಗೂ ವಲಸೆ ಯಾಕ್ರಿ, ನಿಮ್ಮೂರಲ್ಲೆ ಉದ್ಯೋಗ ಖಾತ್ರಿ ಅಭಿಯಾನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮತದಾನ ಜಾಗೃತಿ ಮೂಡಿಸುವ ರಂಗೋಲಿ ಹಾಕಿದ ಸ್ಪರ್ಧಿಗಳಿಗೆ ಪ್ರಥಮ ಸ್ಥಾನ, ದ್ವಿತೀಯ ಹಾಗೂ ತೃತೀಯ ಸ್ಥಾನ ಆಯ್ಕೆ ಮಾಡಿ ಕಾರ್ಯನಿರ್ವಾಹಕ ಅಧಿಕಾರಿ ತಾರಾ ಎನ್ ಅವರು ಪ್ರಶಸ್ತಿ ಪತ್ರ ನೀಡಿದರು.

ಬಳಿಕ ಕಾರ್ಯನಿರ್ವಾಹಕ ಅಧಿಕಾರಿ ತಾರಾ ಎನ್ ಅವರು ಸ್ವ ಸಹಾಯ ಸಂಘದ ಮಹಿಳೆಯರಿಗೆ ಮತದಾನ ಅರಿವು ಮೂಡಿಸಿ, ಕಡ್ಡಾಯವಾಗಿ ಮತದಾನ ಮಾಡುವಂತೆ ತಿಳಿಸಿದರು. ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಇನ್ನು ಕಾರ್ಯನಿರ್ವಾಹಕ ಅಧಿಕಾರಿ ತಾರಾ ಎನ್ ಅವರು ವಲಸೆ ಯಾಕ್ರಿ, ನಿಮ್ಮೂರಲ್ಲೆ ಉದ್ಯೋಗ ಖಾತ್ರಿ ಅಭಿಯಾನ ಮೂಲಕ ಕೂಲಿ ಕೆಲಸದಲ್ಲಿ ಆಸಕ್ತಿ ಇರುವ ಮಹಿಳೆಯರಿಗೆ ಫಾರ್ಮ್ ನಂ 6 ನೀಡಿ, ಉದ್ಯೋಗ ಹಾಜರಾಗುವಂತೆ ತಿಳಿಸಿದರು. ಈ ವೇಳೆ ನಲ್ಲಿ 53 ಜನರಿಗೆ ಉದ್ಯೋಗ ನೀಡುವಂತೆ ಕೂಲಿ ಕಾರ್ಮಿಕರು ಫಾರ್ಮ್ ನಂ 6 ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸೋಮಶೇಖರ್ ಎಚ್. ಜಿ, ಐಇಸಿ ಸಂಯೋಜಕ ಬಸವರಾಜ ಕೊಪ್ಪದ , ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕ ಕೃಷ್ಣಾಜಿ ಪವಾರ್ , ಗ್ರಾಮ ಕಾರ್ಯದರ್ಶಿ ಸಂಗಪ್ಪ ಎತ್ತಲ್ಲದಡ್ಡಿ, ಡಾಟಾ ಎಂಟ್ರಿ ಆಪರೇಟರ್ ಯಶೋಧಾ ಪಾಟೀಲ್ , ಬಿಲ್ ಕಲೆಕ್ಟರ್ ಮಹಾಂತೇಶ್ ರಶ್ಮಿ, ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ನಾನು ಗಜಕೇಸರಿ ಯೋಗದಲ್ಲಿ ಹುಟ್ಟಿದ್ದೇನೆ ನನಗೆ ಡಬಲ್ ಲಕ್ಕಿದೆ: ಸಂಯುಕ್ತ ಪಾಟೀಲ



**ಮುಧೋಳ :** ಕಾಂಗ್ರೆಸ್ ಪಕ್ಷದ ಗೃಹಕಚೇರಿಯಲ್ಲಿ ಭೂತ್ ಮಟ್ಟದ ಏಜೆಂಟರ್ ಸಭೆಯಲ್ಲಿ ಮಾತನಾಡಿ, ನಾನು ಗಜಕೇಸರಿ ಯೋಗದಲ್ಲಿ ಹುಟ್ಟಿದ್ದೇನೆ. ಬಾಗಲಕೋಟೆ ಲೋಕಸಭಾಚುನಾವಣೆಯಲ್ಲಿನನಗೆಗೆಲವು ಆಗುತ್ತದೆ. ನನ್ನ ಲಕ್ ತುಂಬಾ ಒಳ್ಳೆಯದಿದೆ. ವೃತ್ತಿಯಲ್ಲಿ ನ್ಯಾಯವಾದಿಯಾಗಿ, ಕಾಂಗ್ರೆಸ್ ಪಕ್ಷದ ಯುವ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಎರಡು ಬಾರಿ ವಿಜಯಪುರ ಡಿಸಿಸಿ ಬ್ಯಾಂಕಿನ ನಿರ್ದೇಶಕಳಾಗಿ ಕಾರ್ಯ ನಿರ್ವಹಿಸಿದ್ದು, ಕಾಂಗ್ರೆಸ್ ಪಕ್ಷದಲ್ಲಿ ಏಳೆಂಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಈ ಬಾರಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ನಿಮ್ಮ ಮನೆಯ ಮಗಳೆಂದು ಹಾಗೂ ನಿಮ್ಮ ಸಹೋದರಿಯಾಗಿ ಹಗಲಿರುಳು ಕಾರ್ಯ ನಿರ್ವಹಿಸುವ ಮೂಲಕ ಪ್ರತಿ ಮತದಾರರ ಮನೆ-ಮನೆಗೆ ತೆರಳಿ ಮತದಾರ- ರಿಗೆ ತಿಳಿ ಹೇಳುವ ಮೂಲಕ ನನ್ನನ್ನುಗೆಲ್ಲಿಸಬೇಕೆಂದು ವಿನಂತಿಸಿಕೊಂಡಳು

ಬ್ರಿಟಿಷರ ವಿರುದ್ಧವೇ ಹೋರಾಟ ಮಾಡಿ ಸ್ವಾತಂತ್ರ್ಯ ಪಡೆದ ನಮಗೆ ಬಿಜೆಪಿ ವಿರುದ್ಧ ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯವೇನಲ್ಲಅವರು ಕಾರ್ಯಕರ್ತರನ್ನು ಹುರುದುಂಬಿಸಿದರು.

ಬಾಗಲಕೋಟೆ ಕಾಂಗ್ರೆಸನಲ್ಲಿ ಯಾವುದೇ ತರಹದ ಅಸಮಧಾನವಿಲ್ಲ. ಎಲ್ಲರೂ ಸೇರಿ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸುತ್ತೇವೆ. ಕಳೆದ 20 ವರ್ಷಗಳಿಂದ ಬಾಗಲಕೋಟೆ ಲೋಕಸಭಾ ಕ್ಷೇತದಿಂದ ಪಿಸಿ ಗದ್ದಿಗೌಡರು ಆಯ್ಕೆಯಾಗಿ ಜಿಲ್ಲೆಯ ಅಭಿವೃದ್ಧಿಯ ನಿಟ್ಟಿನಲ್ಲಿ ಯಾವುದೇ ಕಾರ್ಯ ನಿರ್ವಹಿಸಿಲ್ಲ. ನಾನು ಸಂಸದಳಾಗಿ ಜಿಲ್ಲೆಯ ಸರ್ವಾಂಗಿನ ಅಭಿವೃದ್ಧಿಗೆ ಕಾರ್ಯ ನಿರ್ವಹಿಸುತ್ತೇನೆ. ಕೈಗಾರಿಕೆಗಳ ಸ್ಥಾಪನೆ. ಬಾಗಲಕೋಟೆಯಿಂದ ಕುಡಚಿ ಮಾರ್ಗವಾಗಿ ರೈಲ್ವೆ ನಿರ್ಮಾಣ ಐತಿಹಾಸಿಕ ಸ್ಥಳ ವಾದಂತ ಬಾದಾಮಿ ಪ್ರವಾಸಿ ಸ್ಥಾನವನ್ನಾಗಿ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು. ಯುವಜನತೆಗೆ ಉದ್ಯೋಗ ದೊರಕಿಸಿಕೊಡಲು ಪಯತ್ನ ಮಾಡುತ್ತೇನೆ. ಯುಕೆಪಿ ಸಂತಸ್ತರ ನ್ಯಾಯ ದೊರಕಿಸಿ ಕೊಡುವುದು ರೈತರನ್ನು ಆರ್ಥಿಕವಾಗಿ ಪ್ರಬಳ ಗೊಳಿಸುವ ನಿಟ್ಟಿನಲ್ಲಿ ಕಾರ್ಯ ವಹಿಸುವುದು. ಕ್ಷೇತ್ರದ ಎಲ್ಲಾ ಅಭಿವೃದ್ಧಿಗಳ ಬಗ್ಗೆ ಲೋಕಸಭಾ ಸದನದಲ್ಲಿ ಮಾತನಾಡಿ ಸದನದ ಗಮನ ಸೆಳೆಯಲು ನನಗೆ ಬಾಗಲಕೋಟ ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಪ್ರಚಂಡ ಬಹುಮತದಿಂದ ಆರಿಸಿ ಕೊಡಬೇಕೆಂದು ಮತ್ತೊಮ್ಮೆ ವಿನಂತಿಸಿಕೊಂಡರು.

ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಮಾತನಾಡಿ. ಕೇಂದ್ರ ಸರ್ಕಾರ ವಿರುದ್ಧ ಹರಿಹಾಯಿದರೂ, ದೇಶ ಕಂಡ ಅತ್ಯಂತ ದುರ್ಬಲ ಪ್ರಧಾನಿ ಮೋದಿಯವರಾಗಿದ್ದು, ದೇಶ ಕಾಯುವಲ್ಲಿ ಬಿಜೆಪಿ ವಿಫಲವಾಗಿದೆ. ಹೇಳಿಕೊಳ್ಳಲು ಅವರು ಲಾಯಕ್ಕಿಲ್ಲ, ದೇಶದಲ್ಲಿ ಆತಂಕದ ವಾತಾವರಣವಿದ್ದು, ಅಕ್ಕಪಕ್ಕದ ದೇಶಗಳೊಂದಿಗೆ ಸೌಜನ್ಯವಿಲ್ಲ. ಮೋದಿ, ಮೋದಿ ಎಂದು ಬಡಬಡಿಸುವ ಕೆಲಸ ನಡೆದಿದ್ದು,ಈಗಮೋದಿಯವರಯಾವುದೇ ಅಲೆಯಿಲ್ಲ. ಮೋದಿಯವರ ಹವಾ ಈಗ ದೇಶದಜನತೆಯಮುಂದೆಹವಾಠುಸ್ತಾಗಿದೆ. ಕೇವಲಭಾವನಾತ್ಮಕವಾಗಿಜನರಭಾವನೆಗಳ ಮೂಲಕ ಅವರು ಆಡಳಿತಕ್ಕೆ ಬಂದಿದ್ದು, ದೇಶಾದ್ಯಾಂತ ಬೆಲೆಯೇರಿಕೆಯಾಗುವಂತೆ ಮಾಡಿ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ದೂಡಿದ್ದಾರೆ. ಪುಲ್ವಾಮಾ ದಾಳಿಯಲ್ಲಿ ಬಾಂಬ್ ಹಾಕಿ ನಮ್ಮ ದೇಶದ ಸೈನಿಕರನ್ನು ಬಲಿ ಪಡೆದವರಾರು ಎಂಬುದು ಇದುವರೆಗೆ ತನಿಖೆಯಾಗಿಲ್ಲ. ಚೀನಾ ದೇಶ ಮತ್ತೆ ನಮ್ಮ ದೇಶದ ಗಡಿಯನ್ನು ಅತಿ- ಕ್ರಮಿಸಿಕೊಂಡಿದೆಯೆಂದು ತಿಳಿದು ಬಂದಿದ್ದು, ಅದನ್ನು ದೇಶದ ಜನತೆಯ ಮುಂದೆಮುಚ್ಚಿಡಲಾಗಿದೆ.ಸಂವಿಧಾನಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ ಕಾರ್ಯ ನಿರ್ವಹಿಸುವ ನಾಲ್ಕನೇ ಪತ್ರಿಕಾರಂಗವನ್ನು ಗಣನೆಗೆ ತೆಗೆದುಕೊಳ್ಳದೇ ಸರ್ವಾಧಿಕಾರಿ ನಡೆಸುತ್ತಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವಂತಹ ಕಾರ್ಯ ನಡೆಸಲಾಗುತ್ತಿದೆ. ಜನರ ಸಮಸ್ಯೆ, ಬೇಕುಬೇಡಿಕೆಗಳ ಬಗ್ಗೆ ಮಾಧ್ಯಮದವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸದ ಅವರು, ಕಳೆದ ಹತ್ತು ವರ್ಷಗಳಲ್ಲಿ ಒಮ್ಮೆಯೂ ಪ್ರತಿ-ಕಾಗೋಷ್ಠಿ ನಡೆಸಿಲ್ಲ. ಮಾಧ್ಯಮದವರನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ಅವರು ದೇಶಲ್ಲಿ ಆಡಳಿತ ಮಾಡಿದ್ದಾರೆ. ನ್ಯಾಯಾಂಗ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ವಿಶ್ವದಲ್ಲಿ ದೇಶದ ಮಾನ ಹರಾಜಾಕಿದಂತಾಗಿದೆ. ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿದ್ದು ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ ಪಕ್ಷ ತ್ಯಾಗಿಗಳಪಕ್ಷವಾಗಿದ್ದುನಮ್ಮದೇಶದಶಾಂತಿ, ಐಕ್ಯತೆಯ ಸಲುವಾಗಿ ದಿ.ಇಂದಿರಾಗಾಂಧಿ ಹಾಗೂ ದಿ.ರಾಜೀವಗಾಂಧಿಯವರು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ರಾಜ್ಯದಲ್ಲಿ ಸಿದ್ದರಾಮಯ್ಯನೇತೃತ್ವದಕಾಂಗ್ರೆಸ್‌ಸರ್ಕಾರ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡ್ತಾ ಇದೆ. ಐದು ಗ್ಯಾರಂಟಿ ಗಳು ನಮ್ಮ ಕಾಂಗ್ರೆಸ್ ಪಕ್ಷದ ಗೆಲುವಿಗೆ ವರದಾನವಾಗಲಿದೆ ಎಂದು ಹೇಳಿದರು ಪ್ರತಿ ತಿಂಗಳು 2000 ರೂ ಪಡೆದುಕೊಂಡಿರುವಂತಹ ಎಲ್ಲ ತಾಯಂದಿರು ಮತ ನೀಡುತ್ತಾರೆ. ಬಸ್ಸಿನಲ್ಲಿ ಉಚಿತವಾಗಿ ಓಡಾಡುವಂತ ಎಲ್ಲಾ ಅಕ್ಕತಂಗಿಯರು ತಾಯಂದಿರು ನಮಗೆ ಮತ ನೀಡುತ್ತಾರೆ. ಬಡವರು ಶ್ರೀಮಂತರು ಎನ್ನದೆ ಎಲ್ಲಾ ಮನೆಗಳಿಗೆ ಉಚಿತವಾಗಿ 200 ಯೂನಿಟ್ವ ವಿದ್ಯುತ್ ಪಡೆದುಕೊಂಡಿರುವಂತ ಎಲ್ಲ ಮನೆಯವರು. ನಮಗೆ ಮತ ನೀಡುತ್ತಾರೆ 5 ಕೆಜಿ ಅಕ್ಕಿ ಮತ್ತು ಐದು ಕೆಜಿಯ ಹಣವನ್ನು ಪಡೆದುಕೊಂಡಿರುವ ಎಲ್ಲಾ ನಾಗರಿಕರು ಸಾರ್ವಜನಿಕರು ನಮಗೆ ಮತ ನೀಡುತ್ತಾರೆ. ನುಡಿದಂತ ನಡೆದ ಸರ್ಕಾರಕ್ಕೆ ಮತ ಖಂಡಿತವಾಗಿ ನೀಡುತ್ತಾರೆ ಕಾಂಗ್ರೆಸ್ ಪಕ್ಷ ಯಾವತ್ತೂ ಕೂಡ ಸುಳ್ಳಿನ ಭರವಸೆಗಳನ್ನು ನೀಡುವಂತಹ ಪಕ್ಷವಲ್ಲ. ಈ ಬಾರಿ ರಾಜ್ಯದಲ್ಲಿ 20ಕ್ಕಿಂತ ಹೆಚ್ಚು ಕಾಂಗ್ರೆಸ್ ಲೋಕಸಭಾ ಚುನಾವಣೆಯಲ್ಲಿ ಗೆಲುವು ಪಡೆಯಲಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಆಡಳಿತ ಚುಕ್ಕಾಣಿ ಹಿಡಿಯುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಧೋಳ ಬ್ಲಾಕ್ ಅಧ್ಯಕ್ಷರಾದ ದರೆಪ್ಪ ಸಾಂಗಲೀಕರ್. ಲೋಕಾಪುರ ಬ್ಲಾಕ್ ಅಧ್ಯಕ್ಷರಾದ ಅಶೋಕ್ ಕಿವಡಿ. ಕಾಂಗ್ರೆಸ್‌ಮುಖಂಡರಾದಬಸವಂತ ಕಾಟೆ. ದಾನೇಶ್ ತಡೆಸಲೂರ್. ನಗರ ಘಟಕದ ಅಧ್ಯಕ್ಷರಾದ ರಾಘು ಮೊಕಾಶಿ. ಯೂಥ್ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ವಿನಯ್ ತಿಮ್ಮಾಪುರ್ ಮುದುಕನ್ನ ಒಂಟಗೋಡಿ. ಮಹಿಳಾ ಕಾಂಗ್ರೆಸ್ ಮುಖಂಡರಾದ ಲಕ್ಷ್ಮಿ ಡೋಣಿ. ಶೋಭಾ ಜಿಗಿಜಿನ್ನಿ. ರಾಜ್ಮಾ ಬೆಪಾರಿ. ಮತ್ತು ನಗರಸಭೆ ಸದಸ್ಯರು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಇನ್ನು ಮುಂತಾದ ಕಾರ್ಯಕರ್ತರು ಬೂತ್ ಮಟ್ಟದ ಏಜೆಂಟರು ಉಪಸ್ಥಿತರಿದ್ದರು.

# ಬಿಎಡ್ 2 ಮತ್ತು 4ನೇ ಸೆಮಿಸ್ಟ್ಟರಿ ಫಲಿತಾಂಶ



**ತೇರದಾಳ :** ಬಿಎಡ್ ಎರಡನೇ ಹಾಗೂ ನಾಲ್ಕನೇ ಸೆಮಿಸ್ಟ್ಟರಿ ಫಲಿತಾಂಶವನ್ನು ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯ ಪ್ರಕಟಿಸಿದ್ದು, ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ದಾನಿಗೊಂಡ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ. ವಾಣಿಶ್ರೀ ಕೋನೆ 520(86.7) ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ. ಅದರಂತೆ ರಹೀನಾ ತೇರದಾಳ 519(86.5) ದ್ವಿತೀಯ ಹಾಗೂ ಮೀನಾಕ್ಷಿ ಕುಂಬಾರ 512(85.3)ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಒಟ್ಟು 98 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅದರಂತೆ ನಾಲ್ಕನೇ ಸೆಮಿಸ್ಟ್ಟರಿನಲ್ಲಿ ಅನುಷಾ ಕೆಂಪಲಿಂಗನ್ನವರ 533(88.8) ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ಹಾಗೂ ಭಾಗ್ಯಶ್ರೀ ಯಲ್ಲಟ್ಟಿ 529(88.2) ದ್ವಿತೀಯ ಮತ್ತು ಮುತ್ತವ್ವ ಯಡವನ್ನವರ 528(88%) ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ನಾಲ್ಕನೇ ಸೆಮಿಸ್ಟ್ಟರಿಗೆ ಒಟ್ಟು 57 ವಿದ್ಯಾರ್ಥಿಗಳು ಹಾಜರಾಗಿದ್ದರು ಎಂದು ಪ್ರಾಚಾರ್ಯ ಎಂ.ಆರ್. ಪಾಟೀಲ ತಿಳಿಸಿದ್ದಾರೆ.

# ಮರಳಿ ಕಾಂಗ್ರೆಸ್ ಪಕ್ಷಕ್ಕೆ ಡಾ. ಎ.ಆರ್. ಬೆಳಗಲಿ




**ಮಹಾಲಿಂಗಪುರ :** ಪಟ್ಟಣದ ಖ್ಯಾತ ವೈದ್ಯರು ಹಾಗೂ ತೇರದಾಳ ಮತಕ್ಷೇತ್ರದ ಹಿರಿಯ ರಾಜಕೀಯ ಧುರೀಣ ಡಾ. ಎ. ಆರ್. ಬೆಳಗಲಿ ಅವರು ಬುಧವಾರ ಬಾಗಲಕೋಟ ಜಿಲ್ಲಾ ಕಾಂಗ್ರೆಸ್ ಸಮಿತಿ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಅವರ ಸಮ್ಮುಖದಲ್ಲಿ ಮರಳಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಮಾತೃಪಕ್ಷಕ್ಕೆ ಮರಳಿದ ಡಾ. ಎ.ಆರ್. ಬೆಳಗಲಿ ಮಾತನಾಡಿ 2023ರ ವಿಧಾನಸಭಾ ಚುನಾವಣೆಯಿಂದ ಕಾರಣಾಂತರಗಳಿಂದ ಪಕ್ಷದಿಂದ ದೂರವಿದ್ದೆ, ನಾನು ಹಲವು ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ತನು, ಮನ, ಧನ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಇನ್ನುಳಿದ ಜೀವಿತ ಕಾಲಾವಕಾಶವನ್ನು ಮರಳಿ ಮಾತೃ ಕಾಂಗ್ರೆಸ್ ಪಕ್ಷಕ್ಕೆ ಮೀಸಲಿರಿಸುವ ಸಲುವಾಗಿ ಸಂತೋಷದಿಂದ ಪುನಃ ಪಕ್ಷ ಸೇರ್ಪಡೆಗೊಳ್ಳುತ್ತಿದ್ದೇನೆ ಎಂದರು.

ಇದೆ ಸಂದರ್ಭದಲ್ಲಿ ಜಮಖಂಡಿಯ ಹಿರಿಯ ಮುಖಂಡರಾದ ಕಾಡು ಮಾಳಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಈ ಸಮಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಬೀಳಗಿ ಶಾಸಕ ಜೆ ಟಿ. ಪಾಟೀಲ್, ಮಾಜಿ ಶಾಸಕ ಆನಂದ ನ್ಯಾಮಗೌಡ, ತೇರದಾಳ ಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಸೇರಿದಂತೆ ಹಲವರು ಇದ್ದರು.

## ನಿಧನ ವಾರ್ತೆ

### ಶಶಿಕಾಂತ ವೀರಪ್ಪ ಗೊಳಸಂಗಿ



**ರಬಕವಿ-ಬನಹಟಿ :** ರಬಕವಿಯ ನಾಗಲಿಕ ಬಣಗಾರ ಸಮಾಜದ ಹಿರಿಯರಾಗಿದ್ದ ನಿವೃತ್ತ ಕೆ-ಎಚ್‌ಡಿಸಿ ಅಧಿಕಾರಿ ಶಶಿಕಾಂತ ವೀರಪ್ಪ ಗೊಳಸಂಗಿ (66) ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಮೃತರು ಹಿರಿಯ ನ್ಯಾಯವಾದಿ ಸುರೇಶ ಗೊಳಸಂಗಿ ಇವರ ಸಹೋದರರಾಗಿದ್ದಾರೆ

### ಕಸ್ತೂರಿ ಮಲ್ಲಪ್ಪ ಬನಹಟ್ಟಿ



**ರಬಕವಿ-ಬನಹಟ್ಟಿ :** ನಗರಸಭೆಯ ಆಶ್ರಯ ವಿಭಾಗದ ಅಧಿಕಾರಿ ಮುಖೇಶ ಬನಹಟ್ಟಿ ಇವರ ತಾಯಿ ಲಿಂಗಾಯತ ಗಾಣಿಗ ಸಮಾಜದ ಹಿರಿಯರಾಗಿದ್ದ ಕಸ್ತೂರಿ ಮಲ್ಲಪ್ಪ ಬನಹಟ್ಟಿ ತಮ್ಮ 79 ನೆಯ ವಯಸ್ಸಿನಲ್ಲಿ ಎಪ್ರೀಲ್ 4 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ನಿರ್ಮಲಾ ಭದ್ರನ್ನವರ



**ಬನಹಟ್ಟಿ :** ಇಲ್ಲಿಯ ಸೋಮವಾರ ಪೇಟೆಯ ಅಶೋಕ ಕಾಲನಿಯ ನಿವಾಸಿ ನಿರ್ಮಲಾ ಭದ್ರನ್ನವರ ತಮ್ಮ 66 ನೆಯ ವಯಸ್ಸಿನಲ್ಲಿ ಎಪ್ರೀಲ್ 5 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ಶಂಕರ ದರೂರ ನಿಧನ



**ಮೂಡಲಗಿ :** ಗಾಂಧಿನಗರದ ನಿವಾಸಿ ಗಂಗಾಪರಮೇಶ್ವರಿ ಅರ್ಬನ್ ಕೋ ಆಪ್ ಕ್ರೆಡಿಟ್ ಸೊಸಾಯಿಟಿಯ ನಿರ್ದೇಶಕ ಶಂಕರ ರಾಮಪ್ಪ ದರೂರ (55) ಮಂಗಳವಾರ ನಿಧನರಾದರು, ಮೃತರು ಪತ್ನಿ,ಮೂವರು ಮಕ್ಕಳು ಅಪಾರ ಬಂಧು ಬಳಗ ಅಗಲಿದ್ದಾರೆ.

## ಪುರಸಭೆಯಿಂದ ವಿಭಿನ್ನ ಮತದಾನ ಜಾಗೃತಿ

# ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ: ಈರಣ್ಣ ದಡ್ಡಿ



ಗುರುವಾರ ಕಂದಾಯ ಪಾವತಿಸಿದ ಸಾರ್ವಜನಿಕರಿಗೆ ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಅವರು ಮತದಾನ ಜಾಗೃತಿಯ ಕಂದಾಯ ರಶೀದಿಗಳನ್ನು ನೀಡುವ ಮೂಲಕ ಪುರಸಭೆಯ ವಿಭಿನ್ನ ಮತದಾನ ಜಾಗೃತಿಗೆ ಚಾಲನೆ ನೀಡಿ

**ಮಹಾಲಿಂಗಪುರ :** ಲೋಕಸಭೆ ಚುನಾವಣೆಯ ಹಿನ್ನಲೆಯಲ್ಲಿ ಸ್ಥಳೀಯ ಪುರಸಭೆಯ ಅಧಿಕಾರಿಗಳು ವಿಭಿನ್ನ ರೀತಿಯಲ್ಲಿ ಸಾರ್ವಜನಿಕರಿಗೆ ಮತದಾನ ಜಾಗೃತಿ ಮೂಡಿಸುತ್ತಿದ್ದಾರೆ.

**ತೆರಿಗೆ ರಸೀದಿಗಳಲ್ಲಿ ಮತದಾನ ಜಾಗೃತಿ :** ಪುರಸಭೆಗೆ ವಿವಿಧ ಕಂದಾಯ ಪಾವತಿಸುವ ಸಾರ್ವಜನಿಕರಿಗೆ ಕಂದಾಯ ತುಂಬಿದ ರಸೀದಿಯಲ್ಲಿ ಮತದಾನಕ್ಕಿಂತ ಇನ್ನೊಂದಿಲ್ಲ ನಾನು ಖಚಿತವಾಗಿ ಮತದಾನ ಮಾಡುವೆ ಎಂಬ ಬರಹದ ಶೀಲಹಾಕಿ, ಸಾರ್ವಜನಿಕರು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ತಿಳಿಸುತ್ತಿದ್ದಾರೆ.

**ಜನನ-ಮರಣ ಪ್ರಮಾಣಪತ್ರದಲ್ಲಿ ಜಾಗೃತಿ:** ಪುರಸಭೆಯಿಂದ ನೀಡುವ ಜನನ-ಮರಣ ಪ್ರಮಾಣ ಪತ್ರಗಳಲ್ಲಿಯೂ ಇಂಗ್ಲೀಷನಲ್ಲಿ Nothing Like Voting , I Will Vote For Sure ಎಂಬ ಬರಹದ ಶೀಲ್ ಹಾಕಿ ಕೊಡುವ ಮೂಲಕ ವಿಭಿನ್ನ ರೀತಿಯಲ್ಲಿ ಮತದಾನದ ಜಾಗೃತಿ ಮೂಡಿಸುತ್ತಿದ್ದಾರೆ.

ಮಾತನಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಜವಾದ ಪ್ರಭುಗಳಾದ ಪ್ರಜೆಗಳು ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಸಂವಿಧಾನ ನೀಡಿದ ಹಕ್ಕನ್ನು ಪ್ರತಿಯೊಬ್ಬರು ಚಲಾಯಿಸಬೇಕೆಂದು ಸಾರ್ವಜನಿಕರಲ್ಲಿ ವಿನಂತಿಸಿದರು.

ಪುರಸಭೆಯ ಕಂದಾಯ ಅಧಿಕಾರಿ ಎಸ್. ಎನ್.ಪಾಟೀಲ, ಹಿರಿಯ ಆರೋಗ್ಯ ನಿರೀಕ್ಷಕ ಮಹಾಲಿಂಗ ಮೂಗಳಖೋಡ, ಲೇಖಪಾಲಕ ವ್ಹಿ.ಜಿ.ಕುಲಕರ್ಣಿ, ಎಂ.ಕೆ. ದಳವಾಯಿ, ಕಂದಾಯ ವಿಭಾಗದ ಸಿಬ್ಬಂದಿ ಪ್ರಕಾಶ ಕಟಾಂವಿ, ಈರಣ್ಣ ಕೊಪ್ಪದ, ಪರಶುರಾಮ ಬಂಡಿವಡ್ಡರ, ಜನನ-ಮರಣ ವಿಭಾಗದ ಚಂದ್ರು ಚಿತ್ತರಗಿ ಸೇರಿದಂತೆ ಹಲವರು ಇದ್ದರು.




# ರಾಷ್ಟ್ರೀಯ ಯುವಜನೋತ್ಸವ: ತೋವಿವಿಗೆ ಪದಕಗಳ ಗರಿಮೆ







**ಬಾಗಲಕೋಟೆ :** 37ನೇ ಅಂತರ ವಿಶ್ವವಿದ್ಯಾಲಯಗಳ ರಾಷ್ಟ್ರೀಯ ಯುವಜನೋತ್ಸವು ದಿನಾಂಕ 28 ನೇ ಮಾರ್ಚ್ ರಿಂದ 01 ನೇ ಎಪ್ರಿಲ್ 2024 ರವರೆಗೆ ಪಂಜಾಬ್ ಕೃಷಿ ವಿಶ್ವವಿದ್ಯಾಲಯ, ಲೂದಿನಾದಲ್ಲಿ ನಡೆಯಿತು. ಸದರಿ ಯುಜನೋತ್ಸವದಲ್ಲಿ ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಭಾಗವಹಿಸಿದ 20 ವಿದ್ಯಾರ್ಥಿಗಳು 6 ಬಂಗಾರದ ಪದಕ, 28 ಬೆಳ್ಳಿ ಪದಕಗಳು ಮತ್ತು 1 ಕಂಚಿನ ಪದಕಗಳನ್ನು ಗೆದ್ದು ಕರ್ನಾಟಕದಿಂದ ಭಾಗವಹಿಸಿದ ಒಟ್ಟು 17 ವಿಶ್ವವಿದ್ಯಾಲಯಗಳಲ್ಲಿಯೇ ಹೆಚ್ಚಿನ ಪದಕಗಳನ್ನು ಗೆದ್ದು ವೀರಾಗ್ರಣಿಯಾಗಿ ಹೊರಹೊಮ್ಮಿತು.

ಪ್ರಹಸನ ಸ್ಪರ್ಧೆಯಲ್ಲಿ ಬಂಗಾರದ ಪದಕ, ಏಕಾಂಕ ನಾಟಕ, ಮೂಕಾಭಿನಯ, ಸಮೂಹ ಗಾಯನ, ಲಘು ಸಂಗೀತ ವಿಭಾಗಗಳಲ್ಲಿ ಬೆಳ್ಳಿಯ ಪದಕಗಳನ್ನು ಮತ್ತು ವ್ಯಂಗ್ಯ ಚಿತ್ರ ವಿಭಾಗದಲ್ಲಿ ಕಂಚಿನ ಪದಕಗಳನ್ನು ತನ್ನದಾಗಿಸಿಕೊಂಡ ಬಾಗಲಕೋಟೆಯ ತೋ.ವಿ.ವಿ. ರಾಷ್ಟ್ರಮಟ್ಟದಲ್ಲಿ 3ನೇ ರನ್ನರ್ ಅಪ್ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಪಡೆದು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಮತ್ತು ಕರ್ನಾಟಕಕ್ಕೆ ಕೀರ್ತಿಯನ್ನು ತಂದು ಕೊಟ್ಟಿದೆ.

ಡಾ. ಗಂಗಾಧರ ನರಬೆಂಚಿ ಮತ್ತು ಡಾ. ಸಂಗೀತ ಇವರ ನಿರ್ವಹಣೆ ಮತ್ತು ವಿದ್ಯಾರ್ಥಿ ಕಲ್ಯಾಣ ನಿರ್ದೇಶಕ ಡಾ. ರಾಮಚಂದ್ರ ನಾಯ್ಕರವರ ನೇತೃತ್ವದಲ್ಲಿ ಭಾಗವಹಿಸಿದ ತೋ.ವಿ.ವಿ.ಯ ವಿದ್ಯಾರ್ಥಿಗಳ ತಂಡದ ಸಾಧನೆಯನ್ನು ಕುಲಪತಿ ಡಾ. ವಿಷ್ಣುವರ್ಧನ, ಶಿಕ್ಷಣ ನಿರ್ದೇಶಕ ಡಾ. ಎನ್. ಕೆ. ಹೆಗಡೆ, ಕುಲಸಚಿವರು ಡಾ. ಟಿ.ಬಿ. ಅಳ್ಳೊಳ್ಳಿ ಹಾಗೂ ವಿಶ್ವವಿದ್ಯಾಲಯದ ಸಮಸ್ತ ಅಧಿಕಾರಿಗಳು ವಿಶ್ವವಿದ್ಯಾಲಯ ತಂಡದ ಸಾಧನೆಯನ್ನು ಮುಕ್ತಕಂಠದಿಂದ ಅಭಿನಂದಿಸಿದ್ದಾರೆ ಎಂದು ಸಂವಹನ ಕೇಂದ್ರದ ಮುಖ್ಯಸ್ಥ, ಸಂಪಾದಕ ಡಾ. ಶಶಿಕುಮಾರ್ ಎಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State